## ಅಲೆಗಳ ಕೆಳಗೆ ನಗರ

6ನೇ ಕತೆಯನ್ನು ಹೇಳಲು ಇಷ್ಟಪಡುತ್ತಾರೆ ಮತ್ತು ಇವುಗಳನ್ನು ಸಂಗ್ರಹಿಸುವುದು ಸಂಶೋಧನೆಗೆ ಯೋಗ್ಯವಾಗಿದೆ. ಕೊರ್ಟಜ್ಜೀ (1991) ಪ್ರಾಥಮಿಕ ಶಿಕ್ಷಕರು ಹೇಳುವ ಕತೆಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ, ವಿಶ್ಲೇಷಿಸಿದ್ದಾರೆ. ಇಂಥ ಕೆಲಸವನ್ನು ಶಿಕ್ಷಣ ವ್ಯವಸ್ಥೆಯ ಇತರ ವಲಯಗಳ ಸಿಬ್ಬಂದಿಯ ಮೇಲೂ ಪುನಾರಾವರ್ತಿಸಬಹುದು.

ಶೈಕ್ಷಣಿಕ ಪರಿಸರಗಳಲ್ಲಿ ಸಂಗ್ರಹಿಸಿದ ಜಾನಪದದಿಂದ ಹೊರಗಡೆ ಶೈಕ್ಷಣಿಕ ಸಂಶೋಧನೆಗೆ ವಿದ್ಯಾರ್ಥಿಗಳ ಮನೆಗಳ ಮೌಖಿಕ ಸಂಸ್ಕೃತಿಯ ಮಹತ್ವವನ್ನು ಸಹ ತಿಳಿಯಪಡಿಸಬೇಕಾಗುತ್ತದೆ. ಶರ್ಲೆ ಬ್ರೈಸ್ ಹೀತ್‌ರ(1983) ಬಡ ಅಫ್ರೈ-ಅಮೇರಿಕನ್ ಮತ್ತು ಬಡ ಶ್ವೇತವರ್ಣೀಯ ಕುಟುಂಬಗಳು ಭಾಷೆಯ ಉಪಯೋಗವನ್ನು ಅವಾಹನೆ ಮಾಡುವುದರ ಮೂಲಕ ಇದನ್ನು ಇನ್ನೂ ಸ್ಪಷ್ಟಪಡಿಸಿವೆ. ಜೋರ್ಡಾನ್ ಮತ್ತು ಕಾಲ್ಕಿಕ್ (1985) ಮತ್ತು ವಾಜ್ (1997) ರ ಲೇಖನಗಳು ಸಂಗ್ರಹಿಸಬಹುದಾದ ವ್ಯಾಪಕ ಶ್ರೇಣಿಯ ಸಾಮಗ್ರಿಗಳನ್ನು ವ್ಯಕ್ತಪಡಿಸುತ್ತವೆ. ಇವೆಲ್ಲವೂ ಸಂಶೋಧನೆಗೆ ಲಾಭದಾಯಕವಾಗಿವೆ.

ಶೈಕ್ಷಣಿಕ ಸಂಶೋಧನೆಯಲ್ಲಿ ಮಾಹಿತಿದಾರರನ್ನು ಮುಕ್ತವಾಗಿ ಪ್ರಶ್ನಿಸುವುದರಿಂದ ಸಂಗ್ರಹಿಸಲಾದ ದತ್ತಾಂಶವು ಸ್ಪಷ್ಟವಾಗಿ ದತ್ತಾಂಶದ ಸ್ಥಾನಮಾನವನ್ನು ಹೊಂದಿದೆ. ಎಲ್ಲಿಯ ತನಕ ಸಂವಾದಿಗಳು (ಉತ್ತರ ಕೊಡುವವರು) ಸಂಶೋಧಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿದಿರುತ್ತಾರೋ ಅವರು ಅವಳಿಗೆ ನೇರಪ್ರಶ್ನೆಗೆ ಏನು ಉತ್ತರ ನೀಡಿದರು ಎನ್ನುವುದನ್ನು ದಾಖಲು ಮಾಡಿಕೊಳ್ಳಲಾಗುವುದು. ವಸ್ತುಗಳ ನೈತಿಕ ಸ್ಥಾನಮಾನವೆಂದರೆ ಮಾಹಿತಿದಾರರು ಯಾವ ಸಂಶೋಧಕ ಎಂದು ಸ್ಪಷ್ಟವಾಗಿ ಕೇಳಿಸಿಕೊಳ್ಳಬಹುದು. ಆದರೆ ಆ ರೀತಿ ಸಂಗ್ರಹಿಸಲಾದ ದತ್ತಾಂಶ ತುಂಬಾ ಮೌಲ್ಯಯುತವಾಗಿದೆ. ಒಂದು ವೇಳೆ ಭಾಗವಹಿಸುವವರು ನಾನು ಸಂಶೋಧಕ ಎಂದು ತಿಳಿದಿದ್ದರೆ ನನ್ನ ನೆರೆಹೊರೆಯು ಕಲ್ಪಿಸಿಕೊಂಡ ಯಾವುದನ್ನೆ ನನಗೆ ಅಥವಾ ನ್ಯಾಯೋಚಿತ ಆಟ ಎಂದು ಅರ್ಥೈಸುತ್ತದೆ. ಮೌಖಿಕ ದತ್ತಾಂಶದ ವಿಧಗಳನ್ನು ಕ್ಷೇತ್ರ ಪರಿಸರದಲ್ಲಿ ಗಮನಿಸುವುದರ ಮೂಲಕ ಸಂಗ್ರಹಿಸಲಾಗುತ್ತದೆ. ಇದನ್ನು ವೀಕ್ಷಣೆಯ ನಂತರದ ವಿಭಾಗದಲ್ಲಿ ಪರಿಗಣಿಸಲಾಗಿದೆ.

## ವೀಕ್ಷಣೆಯ ದತ್ತಾಂಶ

ವಾಸ್ತವವಾಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಜೀವನವನ್ನು ವೀಕ್ಷಿಸುವುದು ದತ್ತಾಂಶ ಸಂಗ್ರಹಣೆಯ ನನ್ನ ನೆಚ್ಚಿನ ವಿಧವಾಗಿದೆ. ದಾಖಲೆಗಳ ರಾಶಿ, ಉತ್ತಮವಾಗಿ ಬರೆದಿರುವ ಪುಸ್ತಕ ಅಥವಾ ಸಹಕಾರಿ ಸಂದರ್ಶನಾರ್ಥಿಗಳು ಬೇರೆಯವರಲ್ಲಿ ಉತ್ಸಾಹ ತುಂಬಬಹುದು. ಆದರೆ ಯಾವಾಗಲೂ ಕುಳಿತುಕೊಂಡು ಏನಾದರೊಂದನ್ನು ವೀಕ್ಷಿಸುವುದು ನನ್ನ ಆದ್ಯತೆಯಾಗಿದೆ. ವಾರಗಟ್ಟಲೆ, ತಿಂಗಳುಗಟ್ಟಲೆ ಸಂಗ್ರಹಿಸಲಾದ ದತ್ತಾಂಶ ನನಗೆ ಅತ್ಯಂತ ಸಿಹಿಯಾದ ಜಾಮ್ ಮತ್ತು ಹೆಚ್ಚಿನ ಸುಗಂಧಿತ ದ್ರವ್ಯಗಳು ಮತ್ತು ಮಸಾಲೆ ಪದಾರ್ಥಗಳಿದ್ದಂತೆ ಯಾವಾಗಲಾದರೂ ಸಂಶೋಧನಾ ಯೋಜನೆಯು ಚರ್ಚೆಯಲ್ಲಿರುವಾಗ ನಾನು ಹೋಗಲು ಮತ್ತು ನೋಡಲು ಬಯಸುತ್ತೇನೆ ಅಥವಾ ಅದಕ್ಕಾಗಿ 'ನೇಮಿಸಿಕೊಂಡವರನ್ನು' ಕಳಿಸುತ್ತೇನೆ (ರೋಥ್, 1960) ಅಥವಾ ಪದವಿ ವಿದ್ಯಾರ್ಥಿಗಳು ನನಗಾಗಿ ಅಥವಾ ನನ್ನೊಂದಿಗೆ ಬಂದು ನೋಡಲು ಬಯಸುತ್ತೇನೆ. ಪೂರ್ಣಾವಧಿ ಕೆಲಸವನ್ನು ಹೊಂದುವುದರ ಒಂದು ಅನಾನುಕೂಲತೆ ಎಂದರೆ ವೀಕ್ಷಣೆಯ ದತ್ತಾಂಶವನ್ನು ಸಂಗ್ರಹಿಸಲು ಸಮಯದ ಕೊರತೆ ಮತ್ತು ದಾಖಲಾತಿಗಳ ಮೇಲೆ ಕೆಲಸ ಮಾಡುವ ಅಥವಾ ಸಂದರ್ಶನಗಳನ್ನು ಮಾಡುವ ಒತ್ತಡವಾಗಿದೆ.

ಈ ವಿಭಾಗ ವೀಕ್ಷಣೆಯ ದತ್ತಾಂಶಗಳನ್ನು ಸಂಗ್ರಹಿಸುವ ನಾಲ್ಕು ಅಂಶಗಳನ್ನು ತಿಳಿಸುತ್ತದೆ; ಏನನ್ನು ನೋಡಬೇಕು, ಹೇಗೆ ನೋಡಬೇಕು, ಎಲ್ಲಿ ಮತ್ತು ಯಾವಾಗ ನೋಡಬೇಕು ಮತ್ತು ಕೇಳಬೇಕು; ಮತ್ತು ಅಂತಿಮವಾಗಿ ಏನನ್ನು ದಾಖಲಿಸಬೇಕು;

**ಯಾವುದನ್ನು ನೋಡಬೇಕು.**

ಅನನುಭವಿಗಳು ಮೇಲಿಂದ ಮೇಲೆ ಏನನ್ನು ನೋಡುತ್ತಿರಬೇಕು ಮತ್ತು ಅವರು ಏನು ನೋಡಿದರೋ ಅದನ್ನು ಹೇಗೆ ದಾಖಲಿಸಬೇಕೆಂದು ಕೇಳುತ್ತಾರೆ. ಉತ್ತರಿಸಲು ಇವು ಸುಲಭವಾದ ಪ್ರಶ್ನೆಗಳಲ್ಲ; ಏಕೆಂದರೆ ಇದಕ್ಕೆ ಉತ್ತರ ಸಂದರ್ಭವನ್ನು ಅವಲಂಬಿಸಿರುತ್ತದೆ. ಏನನ್ನು ನೋಡಬೇಕು ಎನ್ನುವುದು ಸಂಶೋಧನೆ ಯಾವುದಕ್ಕೆ ಸಂಬAಧಿಸಿದೆ ಎನ್ನುವುದನ್ನು ಅವಲಂಬಿಸಿದೆ ಯಾವುದೇ ದೀರ್ಘಾವಧಿಯಲ್ಲಿ ಸಾಮಾನ್ಯ ಪರಿಶೀಲನೆಯ ಅವಧಿ ತುಂಬಾ ಕಡಿಮೆ ಇರುವುದರಿಂದ ನಡೆಯುವುದೆಲ್ಲವನ್ನು ಉಪಯುಕ್ತ ರೀತಿಯಲ್ಲಿ ವೀಕ್ಷಣೆ ಮಾಡಲು ಮತ್ತು ದಾಖಲಿಸಲು ಸಾಧ್ಯವಿಲ್ಲ. ಸಾಪೇಕ್ಷವಾಗಿ ಏಕಾಗ್ರತೆಯಿಲ್ಲದೇ ವೀಕ್ಷಿಸುವುದರ ಅವಧಿಯ ನಂತರದ ವಿದ್ಯಮಾನಗಳ ಆಯ್ಕೆಯ ಗುಂಪುಗಳಿಗೆ ನಿಕಟ ಗಮನ ನೀಡಲು ಪ್ರಾರಂಭಿಸಿರುವುದು ಮುಖ್ಯವಾಗಿದೆ. ಮೊದಲೆ ನಿರ್ದಿಷ್ಟ ಪಡಿಸಿದ ಗುರಿಗಳೊಂದಿಗೆ ಯೋಜನೆಯನ್ನು ಪ್ರಾರಂಭಿಸದಿದ್ದರೆ ಮಿತವಾದ ಗಮನವನ್ನು ನೀಡಬೇಕಾಗುತ್ತದೆ. ವೇಲ್ಸಿನ ಸ್ಥಾನಿಕ ಏಕೀಕರಣ ಯೋಜನೆಯಲ್ಲಿ ನಾವು ಯಾವುದರ ಬಗ್ಗೆ ನಮ್ಮ ಗಮನ ಕೇಂದ್ರೀಕರಿಸಬೇಕು ಎನ್ನುವುದರ ಬಗ್ಗೆ ಹಣ ಒದಗಿಸುವ ಸಂಸ್ಥೆಯು (Funding body) ಮೊದಲೇ ನಿರ್ದಿಷ್ಟ ಪಡಿಸಿರುತ್ತದೆ. ಅದರ ಅಧ್ಯಯನಕ್ಕಾಗಿ ನಾವು ಸ್ವಲ್ಪ ಮಟ್ಟಿಗೆ ಕಲಿಕೆಯ ಸಮಸ್ಯೆಯಿರುವ ಮಕ್ಕಳನ್ನು ನೋಡಬೇಕಾಯಿತು. ಅವರು ಮುಖ್ಯವಾಹಿನಿ ವಿದ್ಯಾರ್ಥಿಗಳೊಂದಿಗೆ ಬೆರೆಯುವರೇ ಇಲ್ಲವೇ ಎಂಬುದನ್ನು ಗಮನಿಸಬೇಕಾಯಿತು. ಶಿಕ್ಷಕರನ್ನು ಅಥವಾ ವಿಜ್ಞಾನ ಪಾಠಗಳನ್ನು ಅಥವಾ ಆಟದ ಮೈದಾನದಲ್ಲಿ ಮುಖ್ಯವಾಹಿನಿ ವಿದ್ಯಾರ್ಥಿಗಳ ತಗಾದೆಗಳನ್ನು ಅಥವಾ ಸಿಬ್ಬಂದಿ ವರ್ಗದ ಆಸನ ವ್ಯವಸ್ಥೆಯನ್ನು ಅಥವಾ ಪ್ರಯೋಗಾಲಯದ ತಂತ್ರಜ್ಞನ ಕೆಲಸವನ್ನು ಅಥವಾ ಭೋಜನ ನೀಡುವ ಮಹಿಳೆಯರನ್ನು ನೋಡಲಿಕ್ಕಾಗಿ ನಾವು ಅಲ್ಲಿರುವುದಿಲ್ಲ.

ಈಡನ್‌ಬರ್ಗ್ (ಆಟ್ಕಿನ್‌ಸನ್, 1997ಎ) ನಲ್ಲಿ ನಡೆದ ವೈದ್ಯಕೀಯ ವಿದ್ಯಾರ್ಥಿಗಳ ಮೇಲಿನ ಸಂಶೋಧನೆಯಲ್ಲಿ ಉಪನ್ಯಾಸಗಳು ಅಥವಾ ರೋಗಿಗಳ ಜೀವನ ಅಥವಾ ದಾದಿಯರ ಕೆಲಸ ಅಥವಾ ಆಸ್ಪತ್ರೆಯ ಆಳುಗಳು ಮತ್ತು ಸ್ವಚ್ಛತಾ ಸಿಬ್ಬಂದಿಗಳ ವರ್ತನೆ ಅಥವಾ ವೈದ್ಯರು, ದಾದಿಯರು, ಔದ್ಯೋಗಿಕ ಚಿಕಿತ್ಸಕರು, ಡಯಟಿಷಿಯನ್ಸ್, ವಿಕಿರಣ ಚಿತ್ರಣಾಕಾರರು ಮುಂತಾದವರಿಗಿಂತ ಹಾಸಿಗೆ ಪಕ್ಕದ ಬೋಧನೆಗೆ ಗಮನ ನೀಡುತ್ತಾರೆ. ಇವೆಲ್ಲವೂ ಮಾನವೀಯಶಾಸ್ತ್ರದ ಕೆಲಸಗಳ ಕಾರ್ಯಸಾಧ್ಯ ವಿಷಯವಾಗಿದೆ. ಆದರೆ ಇವುಗಳಲ್ಲಿ ಪ್ರತಿಯೊಂದೂ ಪೂರ್ಣ ಪ್ರಮಾಣದ ಯೋಜನೆಗೆ ಅರ್ಹವಾಗಿದೆ. ಆಟ್ಕಿನ್‌ಸನ್ ಹಾಸಿಗೆ ಪಕ್ಕದ ಬೋಧನೆಗೆ ಗಮನ ನೀಡಿದರು. ಹೀಗಾಗಿ ಅವರು ಕಾರ್ಯನಿರತ ವಿಶ್ವವಿದ್ಯಾನಿಲಯದ ಆಸ್ಪತ್ರೆಗಳ ಇತರೆ ವೇಷಧಾರಿಗಳ ವರ್ತನೆ ಮತ್ತು ಸಂಭಾಷಣೆಯನ್ನು ವೀಕ್ಷಿಸುವುದಾಗಲಿ, ದಾಖಲಿಸುವುದಾಗಲಿ, ವಿಶ್ಲೇಷಿಸುವುದಾಗಲಿ ಮಾಡಲಿಲ್ಲ.

ತರಗತಿ ಕೊಠಡಿ ಜೀವನದ ಜನಾಂಗ ವಿವರಣೆ ಅಧ್ಯಯನದಲ್ಲಿ ಯಾವುದೇ ಪರಿಸ್ಪರ ಪ್ರತಿಕ್ರಿಯೆ ಪ್ರಾರಂಭವಾಗುವುದಕ್ಕಿಂತ ಮೊದಲು ಭಾಗವಹಿಸುವವರ ಉಡುಪುಗಳು, ಕೊಠಡಿಯ ಅಲಂಕಾರ, ಪೀಠೋಪಕರಣ ಮತ್ತು ಜೋಡಣೆ, ಪಾಠಕ್ಕಾಗಿ ಬಳಸುವ ಸಾಮಗ್ರಿಗಳ ಬಗ್ಗೆ ವೀಕ್ಷಿಸುವುದು ಸಾಮಾನ್ಯವಾಗಿದೆ. ಇವುಗಳ ಜೊತೆಗೆ ಆಸನ ಯೋಜನೆಯನ್ನು ರೂಪಿಸುವುದು ಮತ್ತು ಕೊಠಡಿಯ ವಿನ್ಯಾಸ, ಸಮಯದ ದಾಖಲಾತಿಯನ್ನು ಇಟ್ಟುಕೊಂಡಿರುವುದು, ಪಾಠಗಳ ಸಾರಾಂಶವನ್ನು ಬರೆಯುವುದು, ಶಿಕ್ಷಕರ ಭೌತಿಕ ಚಲನವಲನಗಳನ್ನು ವೀಕ್ಷಿಸುವುದು, ಪ್ರಾಯೋಗಿಕವಾಗಿ ಸಾಧ್ಯವಾದಷ್ಟು

ಶಬ್ದಶಃ ಭಾಷಣವನ್ನು ದಾಖಲಿಸಿಕೊಳ್ಳುವುದು ಇತ್ಯಾದಿಗಳೂ ಸಹ 'ವಸ್ತುವಿನ ಉಪಯೋಗ'ಕ್ಕೆ ಗಮನ ನೀಡಲು ಉಪಯುಕ್ತವಾಗಬಹುದು. ಮಾಧ್ಯಮಿಕ ಶಾಲೆಯ (ಡೇಲಾಮೌಂಟ್ ಮತ್ತು ಗಾಲ್ಟನ್ 1986) ಮೊದಲು ವಾರಗಳ ಮೇಲಿನ ORACLE ಯೋಜನೆಯಲ್ಲಿ ವಿದ್ಯಾರ್ಥಿಗಳಿಗೆ ಯಾವ ವಸ್ತುಗಳು ದೊರೆಯುತ್ತವೆ ಮತ್ತು ಅವುಗಳನ್ನು ಹೇಗೆ ಉಪಯೋಗಿಸಲಾಗುತ್ತದೆ ಎನ್ನುವ ಒಂದು ವಿಷಯವನ್ನು ಒಳಗೊಂಡಿದೆ. ಹೊಸ ಶಿಕ್ಷಕರನ್ನು ಅಪರಿಚಿತವಾದ ಕೊಠಡಿಯಲ್ಲಿ, ಪರಿಚಯವಿಲ್ಲದ ವಿಷಯಗಳನ್ನು ಗೊತ್ತಿಲ್ಲದ ಸಹಪಾಠಿಗಳ ಜೊತೆ ಅಧ್ಯಯನ ಮಾಡಲು ಮಕ್ಕಳು ಭೇಟಿ ಮಾಡುತ್ತಾರೆ. ಈ ಅನುಭವ ವಿದ್ಯಾರ್ಥಿಗಳಿಗೆ ತರಗತಿ ಕೊಠಡಿಯಲ್ಲಿ ವಸ್ತುಗಳಿಗೆ ಅವರನ್ನು ಯಾವ ರೀತಿ ಪರಿಚಯಿಸಲಾಯಿತು ಎನ್ನುವುದನ್ನು ತಿಳಿಸುತ್ತದೆ. ಪ್ರತಿಶಿಕ್ಷಕ ತಮ್ಮ ವಿಷಯಗಳಲ್ಲಿ ಹೊಸ ವಿದ್ಯಾರ್ಥಿಗಳಿಗೆ ಉಪಯೋಗ ಮತ್ತು ದುರುಪಯೋಗಗಳ ಬಗ್ಗೆ ನಿಯಮಗಳ ಹೊಂದಾಣಿಕೆಯ ಗುಂಪನ್ನು ನೀಡುತ್ತಾನೆ ಮತ್ತು ಇವುಗಳು ಈ ಶಿಕ್ಷಕರ, ವಿಷಯಗಳ ಮತ್ತು ತರಗತಿಗಳ ಬಗ್ಗೆ ಒಳನೋಟವನ್ನು ನೀಡುವುದರಿಂದ ಅಧ್ಯಯನ ಯೋಗ್ಯವಾಗಿದೆ. ಆರು ಶಾಲೆಗಳಲ್ಲಿನ ಎಲ್ಲಾ ಶಾಲಾ ಕೆಲಸದ ವಸ್ತುಗಳನ್ನು ಉಪಯೋಗಿಸಿಕೊಂಡಿರುವುದನ್ನು ಒಳಗೊಂಡಿದೆ. ಪಠ್ಯ ಪುಸ್ತಕಗಳು, ರೂಲರ್, ಮಡಿಕೆ ತಯಾರಿಕೆ, ಪರಿಶೋಧನೆ ಅಥವಾ ಹಾಕಿ ಸ್ಟಿಕ್‌ಗಳು – ಈ ವಸ್ತುಗಳನ್ನು ಹೇಗೆ ಉಪಯೋಗಿಸಬೇಕು ಎಂಬುದರ ಬಗ್ಗೆ ಎಲ್ಲಾ ಶಿಕ್ಷಕರು ತಮ್ಮದೇ ಆದ ಅಭಿಪ್ರಾಯ ಹೊಂದಿರುತ್ತಾರೆ. ಕೆಲವು ಸಮಯದಲ್ಲಿ ನಿಯಮಗಳು ಪರಿಚಿತ ವಸ್ತುಗಳಿಗೆ, ಉದಾ. ಅಭ್ಯಾಸ ಪುಸ್ತಕ ಅಥವಾ ಪೆನ್ಸಿಲ್, ಅಪರ್ವ ವಸ್ತುಗಳಿಗೆ, ಉದಾ. ಬನ್ಸೆನ್ ಬರ್ನರ್ ಅಥವಾ ಸೂಕ್ಷ್ಮದರ್ಶಕ ಯಂತ್ರಗಳಿಗೆ, ಸಂಬಂಧಿಸಿದ್ದಾಗಿರುತ್ತವೆ. ಹೇಗೆ ಎರಡು ರೀತಿಯ ವಸ್ತುಗಳನ್ನು ಪರಿಚಯಿಸಿದೆ ಎನ್ನುವುದರ ಕುರಿತಾಗಿರುತ್ತದೆ. ಪರಿಚಯಾತ್ಮಕ ವಿಜ್ಞಾನ ಪಾಠಗಳಲ್ಲಿ ಬುನ್ಸೆನ್‌ನ ಉಪಯೋಗದ ವೀಕ್ಷಣೆಗಳು ಲೇಖನ (ಆಟ್ಕಿನ್‌ಸನ್, ಡೇಲಾ ಮೌಂಟ್ ಮತ್ತು ಬೆಯ್ನಾನ್, 1988) ಗೆ ಅವಕಾಶ ಮಾಡಿಕೊಟ್ಟವು. ಇದರಲ್ಲಿ ಬುನ್ಸೆನ್ ಬರ್ನರ್ ರೊಂದಿಗಿನ ಪ್ರಾರಂಭಿಕ ಭೇಟಿಯ ಮೂಲಕ ಶಾಲಾ ವಿಜ್ಞಾನದ ಪಾಠಗಳ ಸ್ವರೂಪವನ್ನು ತಿಳಿಸಲಾಯಿತು.

ವೀಕ್ಷಣೆಯ ಗಮನ ಸಂಶೋಧಕರ ವೈಯಕ್ತಿಕ ಮತ್ತು ಶೈಕ್ಷಣಿಕ ಆಸಕ್ತಿಗಳೆರಡನ್ನೂ ಅವಲಂಬಿಸಿದೆ. ಮೆಟ್ಜ್ (1978) ಅಮೇರಿಕಾದ ಕಿರಿಯ ಪ್ರೌಢಶಾಲೆಗಳಲ್ಲಿ ಹೇಗೆ ಏಕೀಕರಣ ಕಾರ್ಯ ನಿರ್ವಹಿಸಿತು ಎನ್ನುವುದರಲ್ಲಿ ಆಸಕ್ತರಾಗಿದ್ದರು. ಅವರು ಯುವ ತರುಣಾವಸ್ಥೆಯವರ ತರಗತಿ ಕೊಠಡಿಯೊಳಗೆ ಮತ್ತು ಶಾಲೆಯ ಸಾರ್ವಜನಿಕ ಜಾಗಗಳಲ್ಲಿನ ವರ್ತನೆಯನ್ನು ಗಮನಿಸಿದರು. ಬಾಸೆರ್ಟ್ (1979) ರವರು ಕಿರಿಯ ಶಾಲೆಯ ವಿದ್ಯಾರ್ಥಿಗಳು ತರಗತಿ ಕೊಠಡಿಗಳಲ್ಲಿ ನೀಡುವ ಕಾರ್ಯವನ್ನು ಹೇಗೆ ನಿರ್ವಹಿಸುತ್ತಾರೆ ಎನ್ನುವುದನ್ನು ತಿಳಿದುಕೊಳ್ಳಲು ಆಸಕ್ತರಾಗಿದ್ದರು. ಆದ್ದರಿಂದ ಅವರು ಅದರ ಬಗ್ಗೆ ಕೇಂದ್ರೀಕರಿಸಿದರು.

ವೀಕ್ಷಕನ ಗಮನ ಎಲ್ಲಿಯವರೆಗೆ ಒಬ್ಬ ವ್ಯಕ್ತಿ, ವಸ್ತು ಅಥವಾ ಸ್ಥಳದ ಮೇಲೆ ಆಲೋಚನಾತ್ಮಕವಾಗಿ ಸೈದ್ಧಾಂತಿಕವಾಗಿ ಇರುತ್ತದೆಯೊ, ಅಲ್ಲಿಯವರೆಗೆ ಅವನು ಏನು ನೋಡುತ್ತಿದ್ದಾನೆಂಬುದು ಮುಖ್ಯವಾಗುವುದಿಲ್ಲ. ವಿದ್ವಾಂಸನು ಆಹಾರ ಒದಗಿಸುವ ವಿದ್ಯಾರ್ಥಿ ಬಗ್ಗೆ ಇಡೀ ದಿನ ಕೇಂದ್ರೀಕರಿಸಿದಾಗ, ಅವನ ಕೇಂದ್ರೀಕರಣ ಪ್ರತಿಫಲಿತವಾಗಿರುವ ತನಕವೂ ತುಂಬಾ ಉತ್ತಮ ಕೆಲಸ ಮಾಡಬಹುದು; ಅದನ್ನು ಸರಿಯಾಗಿ ದಾಖಲಿಸಬೇಕು ಹಾಗೂ ಸ್ಪಷ್ಟ ಗುರಿ ಹೊಂದಬೇಕು. ಲೈಲಾ ಸುಸ್ಸಮನ್ (1977) ರವರು ಅಮೇರಿಕಾದಲ್ಲಿ ಪ್ರಗತಿಪರ ಪ್ರಾಥಮಿಕ ಶಿಕ್ಷಣ ಮಾಡುತ್ತಿದ್ದರು, ಹೀಗಿದ್ದರೂ ಅವರು ಆಟದ ಮೈದಾನದಲ್ಲಿ ವೀಕ್ಷಣೆ ಮಾಡಲು ಹೆಚ್ಚು ಸಮಯ ಕಳೆಯುತ್ತಿದ್ದರು. ಇದು ವಿಲಕ್ಷಣವಾಗಿ ಕಾಣಿಸಬಹುದು. ಆದರೆ ತರಗತಿ ಕೊಠಡಿಗಳಲ್ಲಿ ಶಿಕ್ಷಕನ ಅಧಿಕಾರವನ್ನು ತೆಗೆದುಹಾಕಿದ್ದರಿಂದ ಉಂಟಾದ ನಿರ್ವಾತವನ್ನು ವಿದ್ಯಾರ್ಥಿ ಸೃಷ್ಟಿ ಸ್ವರೂಪಗಳ ಮೂಲಕ ಭರ್ತಿ ಮಾಡಬಹುದು. ಇದು ಆಟದ ಮೈದಾನದಲ್ಲಿ ಪ್ರಕಟಣೆಗೊಳ್ಳುತ್ತದೆ. ಸಹಪಾಠಿ ಗುಂಪು ರಚನೆ ಮತ್ತು ಶ್ರೇಣಿಗಳು

ಪ್ರಗತಿಪರ ಶಿಕ್ಷಣವಾಗಿ ಆ ಶಾಲೆಗಳಲ್ಲಿ ಜಾರಿಯಾಗುತ್ತಿರುವ ಶಿಕ್ಷಣವನ್ನು ಅವರು ದತ್ತಾಂಶ ಮೂಲಕ ಖಂಡಿಸುವುದು ಮುಖ್ಯಭಾಗವಾಗಿದೆ. ಆಟದ ಮೈದಾನದಲ್ಲಿ ವೀಕ್ಷಣೆ ಮಾಡುವುದು ಅವರ ಸಂಶೋಧನಾ ತಂತ್ರದ ಭಾಗವಾಗಿದೆ.

## ಹೇಗೆ ವೀಕ್ಷಣೆ ಮಾಡುವುದು

ಹೇಗೆ ನೋಡುವುದು ಎನ್ನುವುದನ್ನು ವಿವರಿಸುವುದು ಕಷ್ಟವಾಗಿ ಕಾಣುತ್ತದೆ. ವೀಕ್ಷಣೆ ಮಾಡುವಾಗ ಯಾವಾಗಲೂ ತುಂಬಾ ಎಚ್ಚರಿಕೆಯಿಂದ ಇರಬೇಕು. ಇದು ತುಂಬಾ ಕಷ್ಟ. ನಿರ್ದಿಷ್ಟ ವ್ಯಕ್ತಿ, ಜಾಗ ಅಥವಾ ವಸ್ತುವಿನತ್ತ ಒಂದು ನಿರ್ದಿಷ್ಟ ಸಮಯದ ತನಕ ಗಮನ ನೀಡಬಹುದಾಗಿದೆ. ಉದಾಹರಣೆಗೆ ನಿರ್ದಿಷ್ಟ ವಿದ್ಯಾರ್ಥಿಯನ್ನು ಐದು ನಿಮಿಷಗಳ ಕಾಲ ವೀಕ್ಷಿಸುವುದು, ನಂತರ ಮತ್ತೊಬ್ಬನನ್ನು ಅಷ್ಟೇ ಅವಧಿಗೆ ವೀಕ್ಷಿಸುವುದು. ವ್ಯವಸ್ಥಿತವಾಗಿ ವೀಕ್ಷಣೆ ಮಾಡುವುದು ತುಂಬಾ ಅವಶ್ಯಕವಾಗಿದೆ. ಎಲ್ಲಾ ಪ್ರಕಟಣಾ ಫಲಕಗಳಲ್ಲಿ ಏನಿದೆ ಎನ್ನುವುದನ್ನು ಗಮನಿಸಿ ದಾಖಲಿಸಬೇಕು. ಉಪಯೋಗದಲ್ಲಿರುವ ಎಲ್ಲಾ ಕಾರ್ಯದಾಖಲೆಗಳನ್ನು ಹುಡುಕಿ ಪಟ್ಟಿ ಮಾಡಬೇಕು. ಒಂದು ವೇಳೆ ಒಂದು ಸಿಂಕ್ ಹೊಲಸಾಗಿದ್ದರೆ, ಪ್ರಯೋಗಾಲಯದಲ್ಲಿರುವ ಇತರೆ ಸಿಂಕ್‌ಗಳನ್ನು ಪರೀಕ್ಷಿಸಬೇಕು, ಹಾಸಿಗೆ ಬದಿ ಬೋಧನೆಯ ಸಂದರ್ಭದಲ್ಲಿ ಒಂದು ವೇಳೆ ಒಬ್ಬ ರೋಗಿ ವಿಚಿತ್ರವಾಗಿ ವರ್ತಿಸಿದರೆ, ಇತರರೂ ಹಾಗೆಯೇ ಮಾಡುತ್ತಾರೆಯೇ ಅಥವಾ ಇಲ್ಲವೇ ಎಂಬುದರ ಮೇಲೆ ಕಣ್ಣಿಡಬೇಕು. ಹೇಗೆ ವೀಕ್ಷಿಸಬೇಕು ಎನ್ನುವುದರ ಬಗ್ಗೆ ನನಗೆ ತಿಳಿದಂತೆ ವಾಲ್ಕಾಟ್‌ರ (1981) ಲೇಖನ ಉತ್ತಮ ಲೇಖನವಾಗಿದೆ. ಇದು ಅವರು ಜನಾಂಗ ವಿವರಣೆ ವಿಧಾನಗಳನ್ನು ಬೋಧಿಸಲು ಗಮನ ಸೆಳೆಯುವುದನ್ನು ವಿವರಿಸಿದ್ದಾರೆ. ಇದರ ಚರ್ಚೆ ಒಂದು ಕರೆಯಿಂದ ಪ್ರಾರಂಭವಾಗುತ್ತದೆ. ಅಗಸ್ಸೀಜ್ 19ನೇ ಶತಮಾನದ ಪ್ರಸಿದ್ಧ ಸಸ್ಯಶಾಸ್ತ್ರಜ್ಞ. ಅವರು ಯುವ ಪದವಿ ವಿದ್ಯಾರ್ಥಿಯೊಬ್ಬನಿಗೆ ಒಂದೇ ಸತ್ತ ಮೀನನ್ನು ಎರಡುವಾರಗಳ ಕಾಲ ವೀಕ್ಷಿಸುವಂತೆ ಮಾಡುವುದರ ಮೂಲಕ ಅವನಲ್ಲಿ ಭಯವನ್ನುಂಟು ಮಾಡಿದ್ದರು. ಆದ್ದರಿಂದ ಅವರು ನಿಜವಾಗಿಯೂ ಸಂಪೂರ್ಣ ವೀಕ್ಷಣಾ ತಂತ್ರಗಳ ಮುಖಾಂತರ ಕಲಿತರು. ಅನಂತರ ವಾಲ್ಕಾಟ್ ರವರು ವೀಕ್ಷಣೆಯ ಮೇಲಿನ ಚರ್ಚೆ ಸಾಮಾನ್ಯವಾಗಿ ಹೇಗೆ ಮತ್ತು ಏನನ್ನು ವೀಕ್ಷಿಸಬೇಕು ಎನ್ನುವುದರ ಬದಲಿಗೆ ಕ್ಷೇತ್ರ ಸಂಬಂಧಗಳು, ಪ್ರವೇಶ, ನೀತಿಶಾಸ್ತ್ರಗಳನ್ನು ಪರಿಗಣಿಸುವುದಕ್ಕೆ ಬದಲಾವಣೆಯಾಯಿತು. ವಾಲ್ಕಾಟ್ ತನ್ನ ಕೋರ್ಸ್ನಲ್ಲಿ ಹೇಗೆ ವೀಕ್ಷಿಸಬೇಕು ಎನ್ನುವುದನ್ನು ತಿಳಿದುಕೊಳ್ಳಲು ಸಮಯವೇ ಇಲ್ಲ ಎನ್ನುತ್ತಾರೆ. ಜನಾಂಗ ವಿವರಣೆಯ ವೀಕ್ಷಣಾ ತಂತ್ರಗಳು ಆತ್ಮಾರ್ಥಕ ವಿಧವನ್ನು ಬೋಧಿಸಬಹುದು ಎನ್ನುವುದರ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಾರೆ.

ಕ್ರಾಲ್ (1986) ತನ್ನ ಲೇಖನದಲ್ಲಿ ವಿವರಿಸಿರುವ ಫ್ಯಾಂಡರ್ಸ್ (1970) ವ್ಯವಸ್ಥಿತವಾದ ಕೋಡಿಂಗ್ ಅನುಸೂಚಿಗಳೊಂದಿಗೆ ಮಾಡಿರುವ ಸಂಶೋಧನೆಯು ತುಂಬಾ ವಿಭಿನ್ನವಾಗಿದೆ. ಆ ಕೋಡಿಂಗ್ ಸ್ಕಿಂಗಳಿಗೆ ಹೇಗೆ ಮತ್ತು ಏನನ್ನು ವೀಕ್ಷಿಸಬೇಕು ಎಂಬುದರ ಬಗ್ಗೆ ವೀಕ್ಷಣಾದಾರರಿಗೆ ತರಬೇತಿ ನೀಡುವುದಾಗಿದೆ. ಜನರನ್ನು ಮೇಲಿಂದ ಮೇಲೆ ವೀಕ್ಷಿಸಲು ಅವರಿಗೆ ತರಬೇತಿ ನೀಡುವ ವಾಲ್ಕಾಟ್‌ರ ಪ್ರಯತ್ನವು ತರಬೇತಿದಾರರ ತದ್ರೂಪುಗಳಿಗೆ ಇಳಿಸುವುದರ ಮೂಲಕ ಆತ್ಮಾರ್ಥಕತೆಯನ್ನು ಕಳೆದುಕೊಳ್ಳುತ್ತದೆ. ಈ ಮಿತಿಗಳು ನೀಡಲ್ಪಟ್ಟಾಗ ವಾಲ್ಕಾಟ್ ಏನನ್ನು ಮಾಡಲು ಸೂಚಿಸಿದರು?

ಏನನ್ನು ನೋಡಬೇಕು ಮತ್ತು ಹೇಗೆ ನೋಡಬೇಕು ಎನ್ನುವುದನ್ನು ನಿರ್ಧರಿಸಲು ವಾಲ್ಕಾಟ್‌ರವರು ನಾಲ್ಕು ತಂತ್ರಗಳನ್ನು ಪ್ರಸ್ತಾಪಿಸಿದ್ದಾರೆ. ಅವುಗಳೆಂದರೆ;

1) ವ್ಯಾಪಕವಾದ ವೀಕ್ಷಣೆ
2) ನಿರ್ದಿಷ್ಟವಾಗಿ ಏನೂ ಇಲ್ಲದಿರುವುದರ ವೀಕ್ಷಣೆ

3) ವಿರೋಧಾಭಾಸಗಳನ್ನು ಹುಡುಕುವುದು
4) ಗುಂಪು ಎದುರಿಸುವ ಸಮಸ್ಯೆಗಳನ್ನು ಹುಡುಕುವುದು

ಮೊದಲ ತಂತ್ರವೆಂದರೆ ಎಲ್ಲದಕ್ಕೂ ಪ್ರಯತ್ನಿಸುವುದು ಮತ್ತು ನೋಡುವುದು. ವಾಲ್ಕಾಟ್ (1981 : 254) ಹೇಳಿದಂತೆ ಗೋಡೆಗಳು, ಆಟಗಳು, ಮೇಜು ಬಟ್ಟೆಗಳು, ಜಾಹೀರಾತುಗಳು, ಕಳಪೆ ಪೈಲುಗಳು, ಕಾಲು ದಾರಿ, ಪಿಕ್ನಿಕ್‌ಗಳು, ಹಾಸ್ಯಗಳು, ಒಟ್ಟು ಸೇರುವಿಕೆಯನ್ನು ದಾಖಲಿಸಿ, ಅದಕ್ಕೆ ನೀವು ಹೆಸರು ನೀಡಿ.

ಎಲ್ಲದನ್ನು ನೋಡುವುದು ಮತ್ತು ದಾಖಲಿಸುವುದು ಖಂಡಿತವಾಗಿಯೂ ಅಸಾಧ್ಯ. ಅಸಾಧ್ಯತೆಯು ಎರಡು ಉತ್ತಮ ಪರಿಣಾಮಗಳನ್ನು ಬೀರುತ್ತದೆ. ಮೊದಲನೆಯದು ಆಯ್ಕೆಯಿಂದ ನೋಡುವುದರಿಂದ ಸಂಶೋಧನೆ ಪ್ರಾರಂಭವಾಗುತ್ತದೆ ಮತ್ತು ಎಲ್ಲಿಯ ತನಕ ಆ ಪ್ರಕ್ರಿಯೆ ಮತ್ತು ಆಯ್ಕೆಗಳು ಆತ್ಮಾರ್ಥಕವನ್ನು ಮಾಡುತ್ತಿವೆಯೋ ಮತ್ತು ದಾಖಲಿಸುತ್ತವೆಯೋ ಅಲ್ಲಿಯತನಕ ಅದು ಉತ್ತಮ ಜನಾಂಗ ವಿವರಣೆ ಅನುಸರಿಸುತ್ತದೆ. ಎರಡನೆಯದು ಆಯ್ಕೆ ಮಾಡಲಾದ ಸೆಟ್ಟಿಂಗ್ ಲಕ್ಷಣಗಳು ಅವರು ಮಾಡುವ ರೀತಿಯ ವೀಕ್ಷಣೆದಾರರು ಎನ್ನುವುದರ ಬಗ್ಗೆ ವೀಕ್ಷಣೆದಾರ ತಿಳಿಸಲು ಪ್ರಾರಂಭಿಸುತ್ತಾರೆ. ವಾಲ್ಕಾಟ್ ಹೇಳಿದಂತೆ, ಸಂಶೋಧಕರಾಗಿ ನೀವು ನಿಮ್ಮ ಸ್ವಂತ ಹವ್ಯಾಸಗಳನ್ನು ಕಂಡು ಹಿಡಿಯಲು ಪ್ರಯತ್ನಿಸಿ. ಎಲ್ಲವನ್ನು ವೀಕ್ಷಿಸುವ ತಂತ್ರದ ಮೂರನೆ ಉಪಯುಕ್ತ ಲಾಭವೆಂದರೆ ಆ ಹಂತದಲ್ಲಿ ಸಂಗ್ರಹಿಸಿದ ದತ್ತಾಂಶದ ಬಗ್ಗೆ ಪರಿಚಯವಿಲ್ಲದ ಓದುಗನಿಗೆ ಬರಹರೂಪದ ಲೆಕ್ಕಾಚಾರವನ್ನು ತಿಳಿಸುತ್ತದೆ. ವೃತ್ತಿಪರ ಕಾಲೇಜಿನ ಹೇರ್ ಡ್ರೆಸ್ಸಿಂಗ್ ತರಗತಿಯಲ್ಲಿ ಹೇರ್ ಡ್ರೆöÊಯರ್ಸ್ ಬಳಸುವ ಬಗ್ಗೆ ವಿವರವಾದ ಲೆಕ್ಕಾಚಾರಕ್ಕಿಂತ ಮೊದಲು ಸಂಸ್ಥೆಯ ವಿಶಾಲ ನೋಟ, ಹೇರ್‌ಡ್ರೆಸ್ಸಿಂಗ್ ಜಾಗ ಮತ್ತು ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಗ್ರಾಹಕರ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕ.

ವಾಲ್ಕಾಟ್‌ರ ಎರಡನೆ ತಂತ್ರ ನಿರ್ದಿಷ್ಟವಾಗಿ ಏನು ಅಲ್ಲದಿರುವುದನ್ನು ನೋಡುವುದು ವಿಚಿತ್ರವಾಗಿ ಕಂಡುಬರುತ್ತದೆ. ವಾಸ್ತವವಾಗಿ ಏನಾದರೂ ಅಸಾಮಾನ್ಯವಾದುದು ಸಂಭವಿಸಿದರೆ ಅದು ಮಂಕಾದ ಹಿನ್ನೆಲೆಯಿಂದ ಜಿಗಿದು ಸಂಶೋಧಕನ ಗಮನ ಸೆಳೆಯುತ್ತದೆ. ರಾಡಾರ್‌ನಲ್ಲಿ ಅಡಚಣೆಯನ್ನು ಸೂಚಿಸುವ 'ಬ್ಲಿಪ್' ಸಂಕೇತಕ್ಕೆ ಇದನ್ನು ಹೋಲಿಸಬಹುದು.

ಮೂರು ಮತ್ತು ನಾಲ್ಕನೇ ತಂತ್ರಗಳು ತುಂಬಾ ಸ್ಪಷ್ಟವಾಗಿವೆ. ಸನ್ನಿವೇಶವನ್ನು ವೀಕ್ಷಿಸುವುದರಿಂದ ವಿರೋಧಾಭಾಸಗಳನ್ನು ಪ್ರಯತ್ನಿಸಲು ಮತ್ತು ಗುರುತಿಸಲು ಅಥವಾ ಭಾಗವಹಿಸುವವರು ತಮಗೆ ದೊಡ್ಡ ಸಮಸ್ಯೆ ಯಾವುದು ಎಂದು ಕಂಡುಹಿಡಿಯುವುದು ಎಲ್ಲರಿಗೂ ಗೊತ್ತೇ ಇರುವ ಕೆಲಸಗಳಾಗಿವೆ. ಪರಿಚಿತವಾದುದರ ಜೊತೆ ಹೋರಾಡಲು ಇವೆರಡೂ ಉತ್ತಮವಾಗಿವೆ. ಔಖಂಅಐಇ ಯೋಜನೆಯ ಅವಧಿಯಲ್ಲಿ ಮಕ್ಕಳು ಕಲೆಯಲ್ಲಿ ಮಾಡುವುದಕ್ಕಿಂತ ಉತ್ತಮವಾಗಿ ಸಾಮಾನ್ಯ ಪಾಠದಲ್ಲಿ ಚಿತ್ರ ಬರೆಯುತ್ತಾರೆ ಎನ್ನುವುದನ್ನು ನಾವು ನೋಡಿದ್ದೇವೆ. ದೈಹಿಕ ಶಿಕ್ಷಣದಲ್ಲಿ ಆಗುವುದಕ್ಕಿಂತ ಹೆಚ್ಚಾಗಿ ಸಾಮಾನ್ಯ ತರಗತಿಗಳಲ್ಲಿ ಹೆಚ್ಚು ಚಲನೆ ಆಗುತ್ತದೆ. ವಿರೋಧಾಭಾಸವಾಗಿ ಡ್ರಾಯಿಂಗ್‌ನಲ್ಲಿ ಕಲೆ ಕೊನೆಯ ಸ್ಥಾನದಲ್ಲಿದೆ. ಮತ್ತು ದೈಹಿಕ ಶಿಕ್ಷಣ ಪಾಠಗಳಿಂದು ಸಥಗಿತಗೊಂಡಿವೆ, ವೀಕ್ಷಕರ ಬಹಳ ಪ್ರಸಿದ್ಧವಾದ ಉದಾಹರಣೆ ಭಾಗವಹಿಸುವವರ ಸಮಸ್ಯೆಗಳೇನು ಎನ್ನುವುದನ್ನು ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಉದಾರ (ಪ್ರಗತಿಪರ) ಕಲೆಯ ಸ್ನಾತಕೋತ್ತರ ವಿದ್ಯಾರ್ಥಿಗಳ ಅಧ್ಯಯನದಿಂದ ಪಡೆಯಲಾಗಿದೆ ಎಂದು ಬೆಕರ್ ಮತ್ತು ಅವರ ಸಹಯೋಗಿಗಳು ಲೆಕ್ಕಾಚಾರ ಮಾಡಿದ್ದಾರೆ.

ವಾಲ್ಕಾಟ್‌ರು ತಮ್ಮ ಲೇಖನದ ಕೊನೆಯಲ್ಲಿ ಸಂಕ್ಷಿಪ್ತವಾಗಿ ಐದನೆ ತಂತ್ರವನ್ನು ತಿಳಿಸಿದ್ದಾರೆ. ಅದೇನೆಂದರೆ ಭಾಗವಹಿಸುವವರಿಗೆ ಒಂದು ಸೆಟ್ಟಿಂಗ್‌ನಲ್ಲಿ ವೀಕ್ಷಿಸಲು ಏನು ತರಬೇತಿ ನೀಡಲಾಗುತ್ತದೆಯೋ ಅದನ್ನು ವೀಕ್ಷಿಸಲು ತರಬೇತಿ ನೀಡಲಾಗಿದೆ. ಕ್ವಾಕಿಟಲ್‌ನಲ್ಲಿ ಅವನಿಗೆ ನೀರಿನಲ್ಲಿರುವ ಮೀನನ್ನು ಹೇಗೆ ಹಿಡಿಯಬೇಕು ಎನ್ನುವುದನ್ನು, ತೇಲುತ್ತಿರುವ ಲಾಗ್‌ಗಳು ಮತ್ತುಕಾಡುಗಳಲ್ಲಿ ಜಿಂಕೆಗಳನ್ನು ಹೇಗೆ ಹಿಡಿಯಬೇಕೆನ್ನುವುದನ್ನು ಬೋಧಿಸಲಾಗಿದೆ. ಇಪ್ಪತ್ತೆöÉದು ಹೆಜ್ಜೆ ಹಾಕುವಷ್ಟರಲ್ಲಿ ಟೋಪಿಯನ್ನು ಹೇಗೆ ಹಾಕಬೇಕು ಎನ್ನುವುದನ್ನು ಸ್ನೇಹಿತ ತೋರಿಸಲು ಪ್ರಯತ್ನಿಸಿದನು. ಏಕೆಂದರೆ ಸ್ನೇಹಿತರ ಪ್ರಪಂಚದಲ್ಲಿ ಇದು ಮುಖ್ಯವಾಗುತ್ತದೆ. ನನ್ನ ತಾಯಿ ಸಾಯುತ್ತಿರುವಾಗ ಅನುಭವಿ ನರ್ಸ್‌ಗಳು ಅವಳ ಸಾಯುವ ಪಥದಲ್ಲಿನ ಪ್ರತಿ ಹಂತದಲ್ಲಿ ಸಂಕೇತಗಳ ಮೂಲಕ ಗುರುತು ಮಾಡುವುದನ್ನು ನೋಡಿದ್ದೇನೆ. ಅವರು ಏನನ್ನು ನೋಡಬೇಕು ಅಥವಾ ಮಾಡಬೇಕು ಎನ್ನುವುದನ್ನು ನನಗೆ ಬೋಧಿಸಿದರು. ಹೇರ್ ಡ್ರೆಸ್ಸಿಂಗ್ ತರಗತಿಯಲ್ಲಿ ಕಾಲೇಜು ಉಪನ್ಯಾಸಕ ವಿದ್ಯಾರ್ಥಿಗಳಿಗೆ ಹೇಗೆ ಅತಿ ಹೆಚ್ಚು ಉಷ್ಣದಲ್ಲಿ ಡ್ರೆöÉಯರ್ ಬಳಸಬೇಕು ಎನ್ನುವ ಪ್ರಶ್ನೆಯನ್ನು ಕೇಳುವುದರ ಮೂಲಕ ವಿದ್ಯಾರ್ಥಿಗಳಿಂದ ಪಡೆದ ಉತ್ತರ ದತ್ತಾಂಶವಾಗಬಹುದು. ಇದು ಹೇಗೆ ನೋಡಬೇಕು ಎನ್ನುವುದರ ತರಬೇತಿಯೂ ಸಹ ಆಗಿದೆ.

## ಎಲ್ಲಿ ಮತ್ತು ಯಾವಾಗ ನೋಡಬೇಕು.

ಎಲ್ಲಿ ನೋಡಬೇಕು ಮತ್ತು ಯಾವಾಗ ನೋಡಬೇಕು ಎನ್ನುವುದನ್ನು ಆಯ್ಕೆ ಮಾಡಿಕೊಳ್ಳುವುದು ವ್ಯವಸ್ಥಿತ ತತ್ವಗಳ ಅನ್ವರ್ಥಕ (ಆತ್ಮಾರ್ಥಕ) ನಿರ್ಧಾರ ಕೈಗೊಳ್ಳುವುದಾಗಿದೆ. ಇದನ್ನು ವೇಲ್ಸಿನ ಸ್ಥಾನಿಕ ಸಮಗ್ರತೆ ಅಧ್ಯಯನದಲ್ಲಿ ನಿರೂಪಿಸಲಾಗಿದೆ (Upton et al. 1988). ಈ ಸಂಶೋಧನೆ ಕಲಿಕಾ ತೊಂದರೆಯಿರುವ ಮಕ್ಕಳನ್ನು ಸಾಮಾನ್ಯ ಶಾಲೆಯ ಮಕ್ಕಳೊಂದಿಗೆ ಹೇಗೆ ಸಂಯೋಜನೆ ಮಾಡಿದೆ ಎನ್ನುವುದನ್ನು ತಿಳಿಸಿದೆ. ಕಲಿಕಾ ತೊಂದರೆಯನ್ನು ಎದುರಿಸುತ್ತಿರುವ ಮಕ್ಕಳನ್ನು ಅರ್ಧ ದಿನ ಅವರ ಎಲ್ಲಾ ಚಟುವಟಿಕೆಗಳ ಮುಖಾಂತರ ಅವರ ವರ್ತನೆಯನ್ನು ವೀಕ್ಷಣೆ ಮಾಡುವುದಕ್ಕೆ ಗಮನ ನೀಡಿದೆ. ಶಾಲೆಗಳಲ್ಲಿ ನನಗೆ ಸಂಬಂಧಿಸಿದ ತರಗತಿಯನ್ನು ತೆಗೆದುಕೊಳ್ಳಲು ಬೆಳಿಗ್ಗೆಯೇ ಹೋಗಿ ಮಕ್ಕಳಿಗೆ ಪರಿಚಯ ಮಾಡಿಕೊಂಡೆನು. ಒಂದು ವೇಳೆ ಶಾಲೆಯಲ್ಲಿ ಸಭೆ ಇದ್ದರೆ, ಅದರಲ್ಲಿ ನಾನು ಭಾಗವಹಿಸುತ್ತೇನೆ. ಅನಂತರ ನನಗೆ ನಿಗದಿಪಡಿಸಿರುವ ಮಗುವಿನ ತರಗತಿಯಲ್ಲಿ ವಿರಾಮದ ತನಕ ಇರುತ್ತೇನೆ. ಸಾಮಾನ್ಯವಾಗಿ ವಿರಾಮದ ವೇಳೆಯನ್ನು ಸಿಬ್ಬಂದಿ ಕೊಠಡಿಯಲ್ಲಿ ಅನಂತರ ಭೇಟಿ ಮಾಡಬಹುದಾದ ಶಿಕ್ಷಕರನ್ನು ಭೇಟಿ ಮಾಡಲು ಕಳೆಯುತ್ತೇನೆ. ಮಧ್ಯಾಹ್ನದ ಊಟದ ಸಮಯದಲ್ಲಿ ಏಕೀಕರಣ ಅಥವಾ ಭಾವೈಕ್ಯ ಅಲ್ಲಿ ಹೇಗೆ ನಡೆಯುತ್ತದೆ ಎನ್ನುವುದನ್ನು ನೋಡಲು ಸಾಮಾನ್ಯವಾಗಿ ಮಕ್ಕಳೊಂದಿಗೆ ಊಟ ಮಾಡುತ್ತೇನೆ ಅಥವಾ ನೆರೆಹೊರೆಯಲ್ಲಿರುವ ಅಂಗಡಿಗಳು ಮತ್ತು ಆಟದ ಮೈದಾನದಲ್ಲಿ ನನಗೆ ನಿಗದಿಪಡಿಸಿರುವ ಮಕ್ಕಳನ್ನು ವೀಕ್ಷಿಸುತ್ತೇನೆ. ಪರ್ಯಾಯವಾಗಿ ಮಧ್ಯಾಹ್ನ ಸಿಗಬಹುದಾದ ಶಿಕ್ಷಕರನ್ನು ನೋಡಲು ಹೋಗುತ್ತೇನೆ. ನೋಂದಣಿಯಲ್ಲಿ ನನಗೆ ನಿಗದಿಯಾದ ಮಕ್ಕಳನ್ನು ಆಯ್ದುಕೊಂಡು ಸಂಶೋಧಕ ಶಾಲೆ ಮುಗಿಯುವ ಸಮಯದ ತನಕ ಪುನಃ ನಾಲ್ಕು ತರಗತಿಗಳಲ್ಲಿ ಹಾಜರಾಗುತ್ತೇನೆ. ನೀತಿ, ನಿಯಮ, ಶಿಷ್ಯರ ಸಮಗ್ರತೆ ವ್ಯಾಪಕತೆಯನ್ನು ತಲುಪಲು ವಿವಿಧ ಸನ್ನಿವೇಶಗಳಲ್ಲಿ ವಿವಿಧ ಅರ್ಥ ನೀಡುತ್ತದೆ.

ವೀಕ್ಷಣೆಯು ಮೂರು ರೀತಿಯ ಸನ್ನಿವೇಶಗಳಲ್ಲಿ ನಡೆಯುತ್ತದೆ.

1) ವಿದ್ಯಾರ್ಥಿಗಳು ತಮ್ಮ ಚಟುವಟಿಕೆಗಳನ್ನು ಮತ್ತು ಅವರ ಸಹಪಾಠಿಗಳನ್ನು ಆಯ್ಕೆ ಮಾಡಿಕೊಳ್ಳಲು ಮುಕ್ತರಾಗಿರುವಾಗ

2) ಮಕ್ಕಳ ಗುಂಪು ದೊಡ್ಡದಾದಾಗ ಸಭೆಗಳು, ಮಧ್ಯಾಹ್ನ ಊಟಮಾಡುವಾಗ ಮತ್ತು ಸಾಮೂಹಿಕ ಗಾಯನ ಮುಂತಾದ ವಿಶಾಲವಾದ ಗುಂಪುಗಳಲ್ಲಿ ಸಾಪೇಕ್ಷವಾಗಿ ಮುಕ್ತವಾಗಿ ಬೆರೆಯುವಾಗ
3) ಶಿಷ್ಯರ ಸಣ್ಣ ಗುಂಪು ಪಾಠಗಳಂತಹ ನಿಕಟ ಸಾಮೀಪ್ಯದಲ್ಲಿರುವಾಗ

ಈ ಮೂರು ಸನ್ನಿವೇಶಗಳಲ್ಲೂ ವೀಕ್ಷಣೆ ಮಾಡುವುದನ್ನು ಕೆಲವು ಶಾಲೆಗಳು ಲಿಂಗ ಪ್ರತ್ಯೇಕತೆಯಿಂದ ಜಟಿಲಗೊಳಿಸಿದೆ. ಬಾಲಕ ಮತ್ತು ಬಾಲಕಿಯರಿಬ್ಬರೂ ಪ್ರತ್ಯೇಕ ಕರಕುಶಲ ವಿಷಯಗಳಿಗೆ ಹಾಜರಾದಾಗ ವೀಕ್ಷಕ ಕೇವಲ ಒಂದು ಲಿಂಗದವರು ಮಾತ್ರ ಕೆಲಸದಲ್ಲಿ ನಿರತನಾಗಿರುವುದನ್ನು ಕಾಣುತ್ತಾನೆ. ಈ ಶಾಲೆಗಳಲ್ಲಿ ಆ ಯೋಜನೆಯ ಅವಧಿಯಲ್ಲಿ ಈ ಮೂರೂ ಸನ್ನಿವೇಶಗಳಲ್ಲೂ ಸಮಯ ಕಳೆಯುವುದು ಮುಖ್ಯವಾಗಿದೆ ಹಾಗೂ ಲಿಂಗ ಪ್ರತ್ಯೇಕತೆ ವರ್ಗಗಳಲ್ಲಿ ಎರಡೂ ಲಿಂಗಗಳನ್ನು ವೀಕ್ಷಿಸುವುದು ಅಥವಾ ಜಾಗಗಳು (ಬಾಲಕರು ಊಟ ಮಾಡುವ ಜಾಗ) ಮತ್ತು ಮಿಶ್ರವಾಗಿರುವಾಗ (ಗಣಿತದ ಪಾಠಗಳು) ವೀಕ್ಷಿಸುವುದು ಸಹ ಮುಖ್ಯವಾಗಿದೆ.

ತರಗತಿಗಳಲ್ಲಿ ವೀಕ್ಷಣೆ ಮಾಡುವುದು ಎಷ್ಟು ಮುಖ್ಯವೋ ಅದೇ ರೀತಿ ಶಾಲಾ ಆವರಣ, ಅಂಗಳ, ಊಟಕ್ಕೆ ಕೂಡುವ ಜಾಗ, ಶಿಕ್ಷಕರ ಕೊಠಡಿಗಳನ್ನು ವೀಕ್ಷಣೆ ಮಾಡುವುದು ಸಹ ಅಷ್ಟೇ ಮುಖ್ಯವಾಗಿದೆ. ಶೈಕ್ಷಣಿಕ ಸೆಟ್ಟಿಂಗ್‌ನಲ್ಲಿ ಅನೇಕ ಜನಾಂಗ ವಿವರಣೆಗಳಲ್ಲಿ ಸಿಬ್ಬಂದಿ ಕೊಠಡಿಗಳಲ್ಲಿ ವೀಕ್ಷಣೆಗೆ ಮತ್ತು ಆಲಿಸುವಿಕೆಗೆ ಸಮಯ ಕಳೆಯುವುದು ತುಂಬಾ ಮುಖ್ಯವಾಗಿದೆ. ತರಗತಿ ಕೊಠಡಿಗಳಲ್ಲಿನ ಚರ್ಚೆಗಳಂತೆ (ಎಡ್ವರ್ಡ್ ಮತ್ತು ವೆಸ್ಟ್ಗೇಸ್, 1994) - ಸಿಬ್ಬಂದಿ ಕೊಠಡಿಯಲ್ಲಿ ಮಾಡುವ ಚರ್ಚೆಯೂ ಕೂಡ ಮುಖ್ಯವಾಗಿದೆ. ತರಗತಿ ಕೊಠಡಿಗಳಂತೆ ಸಿಬ್ಬಂದಿ ಕೊಠಡಿಗಳು ಸಹ ವೀಕ್ಷಣೆ ಮಾಡಲು ಮುಖ್ಯವಾಗಿವೆ ಮತ್ತು ಅಲ್ಲಿ ನಡೆಯುವ ವಿವಿಧ ರೀತಿಯ ಚರ್ಚೆಗಳು ದತ್ತಾಂಶದ ವಿವಿಧ ರೂಪಗಳಾಗಿವೆ. ಆಂಡ್ರೂರ್ಯ ಹಾರ್ಗ್ರಿವ್ಸ್ (1984) ಸಿಬ್ಬಂದಿ ಕೊಠಡಿಯ ಚರ್ಚೆ ಎಷ್ಟರ ಮಟ್ಟಿಗೆ ನಡೆಯುತ್ತದೆಯೋ ಅದನ್ನು ಅವರು ಭಿನ್ನತೆಯ ವಾಕ್ಚಾತುರ್ಯ ಎಂದು ಕರೆದಿದ್ದಾರೆ. ಅಂದರೆ ಚರ್ಚೆ ಅಥವಾ ಮಾತು ವ್ಯತ್ಯಾಸ 'ಸಂವೇದನಾಶೀಲ' 'ವಾಸ್ತವಿಕ' ಶಿಕ್ಷಕರನ್ನು ವಾಸ್ತವಿಕತೆಯ ಅಭಾವವುಳ್ಳ ಇತರರೊಂದಿಗೆ ವ್ಯತ್ಯಾಸ ಕಲ್ಪಿಸುವುದು, ಮಾಧ್ಯಮಿಕ ಶಿಕ್ಷಕರು ಆಗಿಂದಾಗ್ಗೆ ಪ್ರಾಥಮಿಕ ಶಿಕ್ಷಕರಿಗಿಂತ ತಾವು ಭಿನ್ನ ಎಂದು ತೋರ್ಪಡಿಸಿಕೊಳ್ಳುತ್ತಾರೆ. ಪ್ರಾಥಮಿಕ ಶಿಕ್ಷಕರಿಗೆ 'ಮೃದು' 'ಅವಕಾಶ ನೀಡುವ' ಮತ್ತು ಪ್ರಗತಿಪರ ಎನ್ನುವ ಹಣೆಪಟ್ಟಿ ಹಚ್ಚಿದ್ದಾರೆ. ಅವರು ಮಕ್ಕಳಲ್ಲಿ ಶಿಸ್ತು ತರಲು ಅಥವಾ ವ್ಯವಸ್ಥಿತವಾಗಿ ಬೋಧಿಸಲು ವಿಫಲವಾಗಿದ್ದಾರೆ. ಈ ಆರೋಪವನ್ನು ಮಾಧ್ಯಮಿಕ ಶಿಕ್ಷಕರು ಮಾಡಿದ್ದಾರೆ (ಸ್ಟಿಲ್ಮನ್ ಮತ್ತು ಮೇಜೆಲ್). ಪ್ರಾಥಮಿಕ ಶಿಕ್ಷಕರ ಬಗ್ಗೆ ಎದ್ದಿರುವ ನಿಂದನೆಯ ಮಾತುಗಳು ಶಕ್ತಿಯುತವಾಗಿದ್ದು ವಾಸ್ತವಾಂಶ ಅಥವಾ ಪುರಾವೆಗಳಿಗೆ ಸ್ವಲ್ಪ ಸಂಬಂಧ ಹೊಂದಿದ್ದ ವಿಚಾರಯುಕ್ತ ವಾದಕ್ಕೆ ನಿರೋಧಕವಾಗಿದೆ.

ಆದಾಗ್ಯೂ ಇದನ್ನು ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ ಕೇಳಿರಬಹುದು. ಸಮರ್ಥಿಸಬಹುದಾದ ಸಾಂಪ್ರದಾಯಿಕ ಮತ್ತು ಪ್ರಗತಿಪರ ಅಭಿಪ್ರಾಯಗಳ ನಡುವೆ ಮಾತುಗಾರಿಕೆಯ ವಿಂಗಡಣೆಯು ಕನಿಷ್ಠ ಪಕ್ಷ 1948 ರಿಂದಲೇ ಗುರುತಿಸಲ್ಪಟ್ಟಿದೆ. ಈ ಆದರ್ಶಗಳ ಬಗ್ಗೆ ಭಾವನೆಗಳು ಕಹಿಯಾಗಿದ್ದವು ಮತ್ತು ಭಾವೋದ್ವೇಗದಿಂದ ಕೂಡಿದ್ದವು. ಆದಾಗ್ಯೂ ಇದರ ಕೆಳಗೆ ಸ್ಥಿರ, ವಿರೋಧ ಗುಂಪುಗಳು ಸರಳ ಚಿತ್ರವೆಂದರೆ ಒಂದು ಸಂವೇದನಾ ಶೀಲ ಶಿಕ್ಷಕರನ್ನು ಹೊಂದಿದ್ದರೆ ಮತ್ತೊಂದು ಅನನುಭವಿ ಶಿಕ್ಷಕರು ಮತ್ತು ದಂತಗೋಪುರದಲ್ಲಿರುವ ಉಪನ್ಯಾಸಕರನ್ನು ಹೊಂದಿದ್ದು ವಾಸ್ತವಿಕತೆ ಇನ್ನೂ ಸಂಕೀರ್ಣವಾಗಿದೆ. ಪ್ರಗತಿಪರ ಮತ್ತು ಸಾಂಪ್ರದಾಯಿಕತೆ ಎಂದರೇನು? ಎನ್ನುವುದರ ಲೆಕ್ಕಾಚಾರ ಐವತ್ತು ವರ್ಷಗಳ ಅವಧಿಯಲ್ಲಿ ಬದಲಾಗಿದೆ ಮತ್ತು ಮಾತುಗಾರಿಕೆಯ ಅಡಿಯಲ್ಲಿ ಎಲ್ಲಾ ಪುರಾವೆಗಳು ಸೂಚಿಸುವುದೇನೆಂದರೆ ಶಿಕ್ಷಕರು 3 R ಗಳನ್ನು ಇದುವರೆಗೆ ಗೌರವಿಸುತ್ತಿದ್ದಂತೆ ಈಗಲೂ ಗೌರವಿಸಬೇಕು. ಶಿಕ್ಷಕ ಮೂಲ ಕೌಶಲಗಳನ್ನು

ಕಡೆಗಾಣಿಸುವುದೆಂದರೆ ಸಂಪ್ರದಾಯವಾದಿಗಳನ್ನು ಸೃಷ್ಟಿಸಿದಂತೆ. ಕೆಲವೇ ಕೆಲವು ಅಂಥ ಶಿಕ್ಷಕರನ್ನು ಇದುವರೆಗೆ ನೈಜ ಜೀವನದಲ್ಲಿ ಕಂಡಿದ್ದೇನೆ. ಆದರೆ ಅವರು ಸಿಬ್ಬಂದಿ ಕೊಠಡಿಯ ಚರ್ಚೆಯ ಭಿನ್ನತೆಯ ವಾಕ್ಚಾತುರ್ಯ ಆಗಿರುವುದಂತೂ ನಿಜ. (ಹಾರ್ಗ್ರಿನ್ಸ್ 1984).

ಖಂಡಿತವಾಗಿಯೂ ಭಿನ್ನತೆಯ ವಾಕ್ಚಾತುರ್ಯ ಶಿಕ್ಷಕರಿಗೆ ಮಾತ್ರ ಸೀಮಿತವಾಗಿಲ್ಲ. ಇದನ್ನು ಎಲ್ಲಾ ಕಡೆ ವಿಶೇಷವಾಗಿ ವಯಸ್ಸಾದವರಲ್ಲಿ ಕಾಣುತ್ತೇವೆ. ಉದಾಹರಣೆಗೆ ಕ್ರಿಕೆಟ್ ಪ್ರಿಯರ ಕುರಿತಾದ ಒಂದು ಅಧ್ಯಯನವು ಸುವರ್ಣಯುಗದ ಹಂಬಲವನ್ನು ಸೃಷ್ಟಿಸುತ್ತದೆ. (ಮಾರ್ಕ್ಸಿರ್ಸ್ (1994 : 29) ಉಲ್ಲೇಖಿಸಿರುವಂತೆ, ಫ್ರಾನ್ಸಿಸ್ ಥಾಮ್ಸನ್ 1898 ರಲ್ಲಿ ಪ್ರಕಟಿಸಿದ 'At Lords' ಕವಿತೆಯಲ್ಲಿ ಇದರ ಬಗ್ಗೆ ಪ್ರಸ್ತಾಪವಿದೆ. 1878 ರಲ್ಲಿ ಥಾಮ್ಸನ್ ಮೆಡಿಕಲ್ ಸ್ಕೂಲ್‌ನಿಂದ ಗೈರು ಹಾಜರಾಗಿ ಗ್ಲಾಸೆಸ್ಟಶ್ಷೈರ್ (W.G. ಗ್ರೇಸ್‌ನೊಂದಿಗೆ) ಓಲ್ಡ್ ಟ್ರಾಫರ್ಡ್ನಲ್ಲಿ ಆಡುವುದನ್ನು ನೋಡಲು ಹೋಗಿದ್ದುದರ ಭಾವನಾತ್ಮಕ ನೆನಪು ಈ ಕವಿತೆಯಲ್ಲಿದೆ (ಥಾಮ್ಸನ್ ಒಬ್ಬ ವೈದ್ಯಕೀಯ ವಿದ್ಯಾರ್ಥಿಯಾಗಿ ಯಶಸ್ವಿಯಾಗಲಿಲ್ಲ, ಲಂಡನ್‌ಗೆ ಹೋಗಿ ಒಬ್ಬ ಮಾದಕ ವ್ಯಸನಿಯಾದ)

ಪ್ರಾರಂಭದ ಸುಮಾರಿನಲ್ಲಿ ಆಟ ಏನಾಗಬೇಕಾಗಿತ್ತೊ, ಅದಾಗಿರಲಿಲ್ಲ ಎಂದು ಜನರು ಹೇಳುತ್ತಾರೆ. ತಂತ್ರಗಳ ಗುಣಮಟ್ಟ, ಕ್ರೀಡಾಮನೋಭಾವ, ನಿಷ್ಠೆ ಅಥವಾ ದೇಶಭಕ್ತಿಗಳು ಚಿರಂತನವಾಗಿ ಅವನತಿಯಲ್ಲಿವೆ... ಹಳೆಯ ಆಟದ ಈ ಪೂಜ್ಯಭಾವನೆ ಅನಿವಾರ್ಯವಾಗಿ ಅದರ ಇಂದಿನ ಅಸಮ್ಮತಿಯೊಂದಿಗೆ ಜೊತೆಗಿದೆ. ಇದಕ್ಕೆ ಈ ಗತಕಾಲ ಮತ್ತು ವ್ಯಕ್ತಿಯ ಸ್ವಂತ ಬಾಲ್ಯಾವಸ್ಥೆಗಳ ನಡುವಿನ ಸಂಬಂಧ ಕಾರಣವಾಗಿರಬಹುದು...... ಬಾಲ್ಯಾವಸ್ಥೆಯ ಮಾಂತ್ರಿಕ ಶಕ್ತಿ (ಅಥವಾ ಹೆಚ್ಚಿನ ಇಂಗ್ಲಿಷ್ ಕ್ರಿಕೆಟ್ ಬರಹಗಾರರ, ಸಾರ್ವಜನಿಕ ಶಾಲೆ ಬಾಲ್ಯತನ) ಇತಿಹಾಸದ ಭಾಗವನ್ನು ಅತಿಕ್ರಮಿಸಿದೆ.

ಮಾಜಿ ಪ್ರಧಾನಿ ಜಾನ್ ಮೇಜರ್ ನಿಂದ ಸಣ್ಣ ಹಳ್ಳಿ ಗ್ರೀನ್‌ನ ನಮ್ರ ಹವ್ಯಾಸಿಯ ತನಕ ಕ್ರಿಕೆಟ್ ಪ್ರೇಮಿಗಳು ಭಾವನೆಗಳನ್ನು ಹಂಚಿಕೊಂಡಿದ್ದಾರೆ ಮತ್ತು ಭಿನ್ನತೆಯ ವಾಕ್ಚಾತುರ್ಯವನ್ನು ಸೃಷ್ಟಿಸಿದ್ದಾರೆ. ಹಜ್ಫ಼್ರ್ಲಡ್ (1983) ಎಲ್ಲಾ ಯುವತಿಯರು ಕನ್ಯೆಯರಾಗಿದ್ದಾಗ ಅಮರತ್ವದ ಬಗ್ಗೆ ಗೊತ್ತಿಲ್ಲದಿದ್ದಾಗ ಮತ್ತು ಅದೇ ರೀತಿಯ ಮಾತುಗಾರಿಕೆಯನ್ನು ಗತಕಾಲದ ಗ್ರಾಮೀಣ ಕ್ರೀಟ್ ಬಗ್ಗೆ ಮಾಡಿದ್ದಾರೆ. ದತ್ತಾಂಶವನ್ನು ಸಂಗ್ರಹಿಸುತ್ತಿರುವಾಗ ಭಿನ್ನತೆಯ ವಾಕ್ಚಾತುರ್ಯ ಮತ್ತು ಭಾವನಾತ್ಮಕ ಅಂಶಗಳನ್ನು ಎಚ್ಚರಿಕೆಯಿಂದ ನೋಡುವುದು ಬುದ್ಧಿವಂತಿಕೆಯಾಗಿದೆ. (ಡೇಲಾ ಮೌಂಟ್, ಆರ್ಟಿಕಿನ್ ಸನ್ ಮತ್ತು ಪ್ಯಾರಿ : ಅಧ್ಯಾಯ 8). ಇಂಗ್ಲೆಂಡ್‌ನಲ್ಲಿ ಇಲ್ಲಿಯವರೆಗೂ ಯಾವುದೇ ಪುಂಡ ಪೋಕರಿಗಳಿರಲಿಲ್ಲ ಎನ್ನುವುದು ಕಟ್ಟುಕತೆಯಾಗಿದೆ. (ಪಿಯರ್‌ಸನ್, 1983; ಡೇಲಾಮೌಂಟ್, 1999) ನಮ್ಮ ಮಾಹಿತಿದಾರರು ಆಹಾರ ಉತ್ತಮ ರುಚಿ ಹೊಂದಿದೆ, ಬೇಸಿಗೆಕಾಲವು ಬಿಸಿಯಾಗಿರುತ್ತದೆ ಮತ್ತು ಪರೀಕ್ಷೆ ಇಲ್ಲದ ತರಗತಿಗಳಲ್ಲಿ ಮಕ್ಕಳನ್ನು ಪಳಗಿಸಬಹುದು ಮತ್ತು ಅನುಸರಿಸಬಹುದೆಂದು ನಂಬಿದ್ದರು. ನಿಮ್ಮ ಕೆಲಸ ಅವರ ಅಭಿಪ್ರಾಯಗಳನ್ನು ಸಂಗ್ರಹಿಸುವುದು, ಆದರೆ ಅವರನ್ನು ನಂಬುವಂತೆ ಮಾಡುವುದಲ್ಲ.

ಭಿನ್ನತೆಯ ವಾಕ್ಚಾತುರ್ಯದ ಜೊತೆಗೆ ಸಾಮಾನ್ಯ ಸಿಬ್ಬಂದಿಕೊಠಡಿಗಳು, ಸಿಬ್ಬಂದಿ ಊಟ ಮಾಡುವ ಜಾಗ ಮತ್ತು ಶಾಲಾ ಸಿಬ್ಬಂದಿ ಕೊಠಡಿಗಳಲ್ಲಿ ಬೇರೆ ರೀತಿಯ ಚರ್ಚೆಯನ್ನು ಕೇಳಿಸಿಕೊಳ್ಳಬಹುದು. ಚತುರನಾದ ವೀಕ್ಷಕನು ಜಾನಪದ, ಹಾಸ್ಯಗಳು, ವ್ಯಾಖ್ಯಾನ, ದುಷ್ಕೃತ್ಯದ ಕತೆಗಳು, ಗಂಭೀರ ಶೈಕ್ಷಣಿಕ ಚರ್ಚೆ ಮತ್ತು ಸಂಶೋಧಕನಿಗೆ ಅಥವಾ ಅವಳ ಬಗ್ಗೆ ಮಾಡಿದ ಕಟು ವಿಮರ್ಶೆ ಬಗ್ಗೆ ಎಚ್ಚರದಿಂದಿರಬೇಕು. ಶೈಕ್ಷಣಿಕ ಸಂಸ್ಥೆಗಳು ಸಮಕಾಲೀನ ಜಾನಪದದಲ್ಲಿ ಶ್ರೀಮಂತವಾಗಿವೆ. ಶಿಷ್ಯರು ಮತ್ತು ವಿದ್ಯಾರ್ಥಿಗಳು (ವಿಶೇಷವಾಗಿ ವೈದ್ಯಕೀಯ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು) ನಾವು ಯಾವುದರ ಬಗ್ಗೆ ಸ್ವಲ್ಪ ತಿಳಿದುಕೊಂಡಿರುತ್ತೇವೆಯೋ ಅದರ ಬಗ್ಗೆ ಅವರು ಹೆಚ್ಚು ಮೌಖಿಕ (ಬಾಯಿಮಾತಿನ)

ಜ್ಞಾನವನ್ನು ಹೊಂದಿರುತ್ತಾರೆ. ಶಿಕ್ಷಕರ, ಉಪನ್ಯಾಸಕರ, ಮುಖ್ಯಸ್ಥರ ಮತ್ತು ಪ್ರಯೋಗಾಲಯದ ತಂತ್ರಜ್ಞರ ಸಮನಾದ ಜಾನಪದವನ್ನು ಸಂಗ್ರಹಿಸಿಲ್ಲ. ಇಂಥ ಜಾನಪದವನ್ನು ಸಂಗ್ರಹಿಸುವುದರಿಂದ ಸಿಬ್ಬಂದಿಯ ವಿವಿಧ ಗುಂಪುಗಳ ಔದ್ಯೋಗಿಕ ಜ್ಞಾನವನ್ನು ಬಹಿರಂಗಪಡಿಸುತ್ತದೆ. ನಗರದ ದಂತಕತೆಗಳನ್ನು ಸಿಬ್ಬಂದಿ ಕೊಠಡಿಗಳ ಮೂಲಕ ಪ್ರಚಾರಮಾಡುವ ಒಂದೇ ಒಂದು ಅಧ್ಯಯನ ಮೋರಿನ್ (1971) ರಲ್ಲಿ ಕೈಗೊಂಡ ಬರ್ಲಿಯಾನ್ಸ್ನಲ್ಲಿನ ಭಯದ ಕುರಿತದ್ದಾಗಿದೆ. ಫ್ಯಾಷನ್‌ನಲ್ಲಿರುವ ಅಂಗಡಿ (ಬೋಟಿಕ್) ಗಳು ಯುವ ಮಹಿಳಾ ಗ್ರಾಹಕರನ್ನು ಶ್ವೇತ ಗುಲಾಮ ವ್ಯಾಪಾರಕ್ಕಾಗಿ ಅಪಹರಣ ಮಾಡುತ್ತಿವೆಯೆಂಬ ಕಥೆಗೆ ಈ ಅಧ್ಯಯನ ಸಂಬಂಧಿಸಿದೆ. ಕೆಲವು ಶಿಕ್ಷಕರು ಈ ಕಟ್ಟುಕತೆ (ಪುರಾಣ) ಯನ್ನು ನಂಬಿರುವುದನ್ನು ಮೊರಿನ್ ಕಂಡುಕೊಂಡಿದ್ದಾರೆ. ಅಲ್ಲದೇ ಹದಿಹರೆಯದ ಹುಡುಗಿಯರಿಗೆ ಬೋಟಿಕ್ (ಅಂಗಡಿ)ಗಳಿಂದ ಫ್ಯಾಷನ್ ವಸ್ತುಗಳನ್ನು ಖರೀದಿಸಬಾರದೆಂದು ಸ್ಪಷ್ಟವಾಗಿ ಎಚ್ಚರಿಕೆ ನೀಡಿದುದನ್ನು ಕೇಳಿಸಿಕೊಂಡಿದ್ದಾರೆ. ಬ್ರಿಟಿಷ್ ಶಾಲೆಯಲ್ಲಿರುವ ಶಿಕ್ಷಕರ ಕೊಠಡಿಗಳು ಖಂಡಿತವಾಗಿಯೂ ಜಾನಪದ ಬೆಳೆಯಲು ಮತ್ತು ಹರಡಲು ಅವಕಾಶ ನೀಡಿದವು. ಸಹೋದ್ಯೋಗಿಗಳು, ಪೋಷಕರು, ಶಿಷ್ಯರು ಮತ್ತು ಶೈಕ್ಷಣಿಕ ನೀತಿ ಮುಂತಾದವು ನಗರ ದಂತ ಕತೆಗಳಿಗೆ ಉತ್ತಮ ವಿಷಯಗಳಾಗಿದ್ದವು. ಸೆಡ್ಜ್ವಿಕ್ (1990) TESನಲ್ಲಿ (16 ಮಾರ್ಚ್ 1990) ಬೇಸಿಗೆ ಕಾಲದಲ್ಲಿ ಇಂಗ್ಲಿಷ್ ಶಾಲೆಗಳಲ್ಲಿ ನಗರ ದಂತಕತೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಬರೆದಿದ್ದಾರೆ.

ನೀವು ಆಧುನಿಕ ಜಾನಪದ ಕಟ್ಟುಕತೆಯನ್ನು ಕೇಳಿರುವಿರೆಂದು ಖಚಿತವಾಗಿ ಹೇಳಬಲ್ಲೆ - ಆ ಕತೆಗಳಲ್ಲಿ ಹೇಳುವವನ ಪ್ರತಿಪಾದನೆಗಳು ನಿಜವಾಗಿರಬಹುದು ಆದರೆ ಅವು ಅವನಿಗೆ ಸಂಭವಿಸಿರುವುದಿಲ್ಲ. ಆದರೆ ಒಂದು ಕುಟುಂಬ ತನ್ನ ಅಜ್ಜಿಯನ್ನು ರಜೆಗಾಗಿ ಫ್ರ್ಯಾನ್ಸ್ಗೆ ಕರೆದೊಯ್ಯಿತು ಎಂಬುದನ್ನು ಅವಳು ಪ್ರಮಾಣ ಮಾಡಿ ಹೇಳುತ್ತಾಳೆ. ಆ ಮುದುಕಿ ಅಲ್ಲೇ ಸತ್ತುಹೋದಳು. ಅವಳ ಹೆಣವನ್ನು ಮನೆಗೆ ತರಲು ಒಂದು ಬಾಕ್ಸ್‌ನಲ್ಲಿ ಹಾಕಿ ಅದನ್ನು ಕಾರಿನ ಮೇಲ್ಭಾಗದಲ್ಲಿ ಇಟ್ಟಿದ್ದರು. ಸೌತ್ ಆಫ್ ಚಾಟರ್ಸ್ ಬಳಿ ಇರುವಾಗ ಅವರು ಒಂದು ಹೋಟೆಲ್‌ನಲ್ಲಿ ಕಾಫಿ ಕುಡಿಯುತ್ತಿರುವಾಗ ಕಾರು ಕಳುವಾಗುತ್ತದೆ. ಶಾಲಾ ಪರೀಕ್ಷೆಗಳು ಮತ್ತು ಮೌಲ್ಯಮಾಪನ ಮಂಡಳಿ ಕಿರುಪುಸ್ತಕಗಳು, 'A Guide to Teacher Assessment' ತಮ್ಮದೇ ಆದ ಜಾನಪದ ಕಟ್ಟುಕತೆಗಳನ್ನು ಆಕರ್ಷಿಸಿದವು. ನನ್ನ ಗಮನಕ್ಕೆ ಬಂದ ಅತ್ಯುತ್ತ್ತಮವಾದುದೆಂದರೆ, ಮುಖಪುಟದ ಮೇಲೆ ಕನ್ನಡಕ ಹಾಕಿಕೊಂಡು ಗೆರೆಗಳುಳ್ಳ ಶರ್ಟ್ ಹಾಕಿದ್ದ, ಮೀಸೆಹೊತ್ತ, ಸುಂದರನಾದ ಯುವ ಶಿಕ್ಷಕ ಮಕ್ಕಳ ಜೊತೆಗಿದ್ದುದಾಗಿತ್ತು. ಇದು ಪಾದ-ಆರೋಗ್ಯದ ಈಜು ತರಗತಿಯಲ್ಲಿ ಕಂಡುಬಂದ ಕಾಲಿನ ಮೇಲಿನ ಗಂಟಿನಂತಿತ್ತು.

ಮತ್ತೊಬ್ಬನು ಹೇಳಿದ್ದಾನೆ: ಇಬ್ಬರು ಶಿಕ್ಷಕರು ಬಾಕ್ಸ್‌ನಲ್ಲಿರುವುದನ್ನು ಮೊದಲ ನೋಟದಲ್ಲೇ ನೋಡಿ ರಾಜಿನಾಮೆ ನೀಡುತ್ತಾರೆ. ಬಾಕ್ಸ್‌ನಲ್ಲಿ ಇಡುವುದರ ಅರ್ಥ ಈ ಜ್ಞಾನವು ಸತ್ತ ಅಜ್ಜಿಗೆ ಸಮಾನವಾದುದು ಎಂಬುದಾಗಿದೆ. ರಾಷ್ಟ್ರೀಯ ಪಠ್ಯಕ್ರಮ ರಿಂಗ್ ಬೈಂಡರ್ ಮತ್ತು ಶಾಲೆಗಳ ಸ್ಥಳೀಯ ಆಡಳಿತ (ಆದರೂ ಮುಖ್ಯಸ್ಥರು ಸ್ಥಿರವಾಗಿ ಆಕ್ಷೇಪಿಸಿದರು) ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಗೆ ಪಡೆದಿದೆ. SEACಗಳ A4ವರಗಿನವು ಕೊನೆಯ ಕ್ಷುಲ್ಲಕ ವಸ್ತುಗಳು. (ಸೆಡ್ಜ್ ವಿಕ್, 1990) ಬ್ರುನ್‌ವಂಡ್ (1983, 1984) ಈ ಆಧುನಿಕ ಜಾನಪದ ವಿಶ್ಲೇಷಣೆಗೆ ಉತ್ತಮ ಪೀಠಿಕೆಯಾಗಿದೆ. ಇದನ್ನು ಆಟದ ಮೈದಾನಗಳಲ್ಲಿ (ಮೀಸರ್ ಮತ್ತು ವುಡ್ಸ್, 1983, 1984; ಡೇಲಾಮೌಂಟ್ ಮತ್ತು ಗಾಲ್ಟನ್, 1986, 1987; ಪುಗ್‌ಸ್ಲೆ eಣ ಚಿಟ., 1996ಚಿ, 1996b) ಮತ್ತು ಸಿಬ್ಬಂದಿ ಕೊಠಡಿಗಳಲ್ಲಿ ಕಾಣಬಹುದು. ಹಾಸ್ಯಗಳ ಮೇಲಿನ ವಿಷಯ ಮತ್ತು ಸಂಗತಿಗಳ ಪ್ರಾಮುಖ್ಯತೆ ಶಿಕ್ಷಣದಲ್ಲಿ ಭಾಗವಹಿಸುವ ಎಲ್ಲರ ಚರ್ಚೆಯಾಗಿದೆ (ಕಾರ್ಯದರ್ಶಿಗಳು, ಉಸ್ತುವಾರಿಗಳು, ಊಟ ಬಡಿಸುವ ಮಹಿಳೆಯರು ಮತ್ತು ಪೋಷಕರು ಅಂಥ ಕತೆಗಳನ್ನು ಹೊಂದಿದ್ದಾರೆ). ಈ ಎಲ್ಲಾ ಮಾಹಿತಿ ಜಾನಪದಕ್ಕೆ ಸಂಬಂಧಿಸಿದೆ.

ಶಿಷ್ಯ ಮತ್ತು ವಿದ್ಯಾರ್ಥಿಗಳು ಶೈಕ್ಷಣಿಕ ಸಂಸ್ಥೆಗಳ ಕ್ಷೇತ್ರದಲ್ಲಿ ಸಂಶೋಧಕ ಹಾಸ್ಯಗಳನ್ನು ಕದ್ದು ಕೇಳಿಸಿಕೊಳ್ಳಬಹುದು ಮತ್ತು ಅಪಮಾನಮಾಡಬಹುದು. ಇವು ರೆಸ್ಪಾಂಡೆಂಟ್‌ಗಳ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಪ್ರಮುಖವಾಗಿವೆ. ಉದಾಹರಣೆಗೆ ಫೈನ್ (1987) ಹದಿಹರೆಯ ಪೂರ್ವಬಾಲಕರು ತಮ್ಮ ಅಪಮಾನಗಳ ಸಂಗ್ರಹದ ಮುಖಾಂತರ ದೊಡ್ಡ ವ್ಯವಹಾರವನ್ನೇ ತಿಳಿಸಿದ್ದಾರೆ. ಅಂಥ ವಿಷಯ ಬಹುಶಃ ಆಕಸ್ಮಿಕವಾಗಿ ಕದ್ದಾಲಿಕೆಯಿಂದ ಅಥವಾ ಜನಾಂಗ ವಿವರಣೆಯ ದೀರ್ಘಾವಧಿ ನಂತರ ಸುಲಭವಾಗುತ್ತದೆ. ಟ್ರಸ್ಟನ್ನು ಸ್ಥಾಪನೆ ಮಾಡಿದಾಗ ಶಿಷ್ಯರು ಸಾಮಾನ್ಯವಾಗಿ ಕೊಳಕು ಕತೆಗಳನ್ನು ವಯಸ್ಕರೊಂದಿಗೆ ಚರ್ಚಿಸಲು ಹಿಂದೆ ಸರಿಯುತ್ತಾರೆ ಎಂದು ಚಾಮನ್ ಹೇಳುತ್ತಾನೆ.

ಮುಕ್ತ ಸಹಪಾಠಿ ಗುಂಪು ಚಟುವಟಿಕೆ ತನ್ನ ಸ್ವರೂಪದಿಂದಾಗಿ ವಿಶೇಷ ಲೋಕವಾಗಿದ್ದು, ಇದರಲ್ಲಿ ವಯಸ್ಕರು ಅನ್ಯಲೋಕದಿಂದ ಒಳನುಗ್ಗುವವರಾಗಿದ್ದಾಗ ವಿಶೇಷವಾಗಿ ಇದುವರೆಗೆ ಮಕ್ಕಳ ಜಾನಪದ ಭಂಡಾರವು ಮಕ್ಕಳು ವಯಸ್ಕರ ಸಭ್ಯತೆಯ ಪ್ರಮಾಣವನ್ನು ಮಕ್ಕಳು ಏನನ್ನು ಆರ್ಥ ಮಾಡಿಕೊಂಡಿರುವರೋ ಅದನ್ನು ಉಲ್ಲಂಘಿಸುತ್ತದೆ.

ಪೈನ್‌ರು (1988) “ಉತ್ತಮ ಮಕ್ಕಳು ಮತ್ತು ಕೊಳಕು ಆಟ” (ಗುಡ್ ಚಿಲ್ಡ್ರನ್ ಅಂಡ್ ಡರ್ಟಿ ಪ್ಲೇ) (ಬಾಮನ್, 1982; 178) ಬಗ್ಗೆ ಈ ರೀತಿ ಬರೆದಿದ್ದಾರೆ. ಕೊಳಕು ಆಟ ಹೇಗೆ ಗುಂಪಿನೊಳಗಡೆ ಮತ್ತು ಹೊರಗಡೆ ಸಂಬಂಧವನ್ನು ರೂಪಿಸುವಲ್ಲಿ ಪ್ರಮುಖವಾಗಿದೆ (ಪು 11). ಎಲಿಜಿಬೆತ್ ಗ್ರುಗೀಯನ್ (1988ಎ) ಆಟದ ಮೈದಾನದಲ್ಲಿ ಆಡುವ ಆಟಗಳಲ್ಲಿ ಚಿಕ್ಕ ಬಾಲಕಿಯರ ಅಸಭ್ಯ ಅಂಶಗಳ ಬಗ್ಗೆ ಸಮಾನ ಅಂಶವನ್ನು ಗಮನ ಸೆಳೆದಿದ್ದಾರೆ. ಸಂಶೋಧಕರಿಗೆ ಇಂಥ ಕೊಳಕು ಮಾತು ಅಸಹ್ಯಕರವಾಗಿರಬಹುದು ಅಥವಾ ಕ್ಷುಲ್ಲಕವಾಗಿ ಕಾಣಬಹುದು ಮತ್ತು ವಯಸ್ಕರ ಗಮನಕ್ಕೆ ಯೋಗ್ಯವಾಗಿದೆ. ಇದು ಇತರ ಕ್ಷೇತ್ರ ಕೌರ್ಯ ಸಂಬಂಧಗಳ ಅಪಾಯಕ್ಕೆ ಸಿಕ್ಕಿಸಿದೇ ಸಂಗ್ರಹಿಸಲು ಅಸಾಧ್ಯವಾಗಬಹುದು. ಉದಾಹರಣೆಗೆ ಊಟದ ಮಹಿಳೆಯರು ಒಂದು ವೇಳೆ ವಯಸ್ಕ ಕಾಡಿಗೆ (Smut) ಹಚ್ಚುವುದನ್ನು ಪ್ರೋತ್ಸಾಹಿಸುವುದನ್ನು ಪ್ರಶ್ನಿಸಬಹುದು. ಬೇರೆಡೆ (ಡೇಲಾಮೌಂಟ್, 1986ಬಿ) ಜನಾಂಗ ವಿವರಣೆಯ ಪ್ರಯತ್ನದ ಭಾಗವಾಗಿ ಈ ಕತೆಗಳನ್ನು ಬೇರೆಡೆ ಪ್ರಕರಣಗಳಿಗೆ ಗಮನ ನೀಡುತ್ತದೆ. ಆದಾಗ್ಯೂ ಗಂಭೀರವಾಗಿ ಅಥವಾ ಹೊರದೂಡುವ ಅವರಲ್ಲಿ ಒಬ್ಬನಿಗೆ ಸಂಬಂಧಿಸಿದಂತೆ ಅದು ಸೂಕ್ಷ್ಮತೆಯ ವಿಧಾನವಾಗಬಹುದು. ಶಾಲೆಯ ಭೌತಿಕ ಲಕ್ಷಣಗಳು ಹೊಸ ಶಿಷ್ಯರಿಗೆ ವಯಸ್ಕನಿಂದ ಮೇಲ್ವಿಚಾರಣೆ ಮಾಡಬಹುದು ಮತ್ತು ಶಿಕ್ಷಕರ ವೈಯಕ್ತಿಕ ಜೀವನದ ಬಗ್ಗೆ ಹದಿಹರೆಯದವರ ಕುತೂಹಲ ಮೂಡಿಸಬಹುದು. ಎಚ್ಚರಿಕೆಯ ಸಂಶೋಧಕಯಾವಾಗಲೂ ನಗರ ದಂತ ಕತೆ ಅಥವಾ ಆಟದ ಮೈದಾನದಲ್ಲಿ ಇತರ ಜಾನಪದ ಅಥವಾ ಸಿಬ್ಬಂದಿ ಕೊಠಡಿಯನ್ನು ತಿರಸ್ಕಾರ ಮಾಡುವುದಿಲ್ಲ.

## ಏನನ್ನು ದಾಖಲಿಸಬೇಕು?

ಈ ವಿಭಾಗದ ಅಂತಿಮ ಸಾರಾಂಶ ಏನನ್ನು ಮತ್ತು ಹೇಗೆ ದಾಖಲಿಸಬೇಕು ಎನ್ನುವುದಾಗಿದೆ. ಸಾಧ್ಯವಾದಷ್ಟು ಕಣ್ಣಿಗೆ ಬೀಳದಂತೆ ಅಥವಾ ಗಮನಕ್ಕೆ ಬರದಂತೆ ದಾಖಲು ಮಾಡುವುದು ಸೂಕ್ತ. ಒಂದು ವೇಳೆ ಎಲ್ಲರೂ A4 ಪ್ಯಾಡ್‌ನಲ್ಲಿ ಬರೆಯುತ್ತಿದ್ದರೆ ಆಗ ಎಲ್ಲಾ ಕ್ಷೇತ್ರ ಕಾರ್ಯಕರ್ತರಿಗೆ A4 ಪ್ಯಾಡ್ ಉತ್ತಮವೆಂದು ಹೇಳಬಹುದು. ಆದಾಗ್ಯೂ ಒಂದು ವೇಳೆ ಬೇರೆ ಯಾರೊಬ್ಬರೂ ಬರೆಯದಿದ್ದಲ್ಲಿ ವೀಕ್ಷಕ ಅನಂತರದ ತನಕ ಬರೆಯುವುದನ್ನು ಬಿಡಬಹುದು ಅಥವಾ ಶೌಚಾಲಯಕ್ಕೆ ನುಗ್ಗುತ್ತಿರಬೇಕಾಗುತ್ತದೆ. ಪ್ಯಾರಿ (1987) “ನೈಸರ್ಗಿಕ ಕ್ಲಬ್‌ಗಳಲ್ಲಿ ಭಾಗವಹಿಸುತ್ತಿರುವಾಗ ನೋಟ್‌ಪುಸ್ತಕದಲ್ಲಿ ಬರೆಯುವ ಸಮಸ್ಯೆಯನ್ನು ಚರ್ಚಿಸಿದ್ದಾರೆ. ಹಾಬ್ಸ್ (1988) ವಿವರವಾದ ಟಿಪ್ಪಣಿ ಬರೆಯಲು ಪಬ್‌ನ

ಮಧ್ಯಭಾಗದಲ್ಲಿ ನಿಲ್ಲದಿರಬಹುದು. ಶೈಕ್ಷಣಿಕ ಸಂಶೋಧಕರು ಸಾಮಾನ್ಯವಾಗಿ ಸಾಧ್ಯವಾದ ಪರಿಸರದಿಂದ ಬರೆಯಲು ಅದೃಷ್ಟವಂತರಾಗಿದ್ದಾರೆ. ಏಕೆಂದರೆ ಭಾಗವಹಿಸುವವರು ಮೇಲಿಂದ ಮೇಲೆ ಅವರಿಂದಲೇ ಬರೆಸುತ್ತಿರುತ್ತಾರೆ. ನಿಯಮವಾಗಿ ಸಂಶೋಧಕ ಸೆಟ್ಟಿಂಗ್‌ನಲ್ಲಿ ಸುಲಭವಾಗಿ ಅವರು ಏನನ್ನು ಸುಲಭವಾಗಿ ಕೊಂಡೊಯ್ಯಲು ಮತ್ತು ಹಿತಕರವಾಗಿ ಮಾಡುವಂತೆ ಮಾಡಲು ಭಾವಿಸುತ್ತಾರೋ ಅದನ್ನು ಬರೆಯುತ್ತಾರೆ. ಒಬ್ಬನ ನೆನಪಿನ ಪ್ರಯೋಗಗಳಿಂದ ಏನನ್ನು ದಾಖಲು ಮಾಡಬೇಕು ಎನ್ನುವುದು ತಿಳಿಯುತ್ತದೆ. ಅನಂತರ ಘಟನೆಗಳನ್ನು ನೆನಪಿಸಿಕೊಳ್ಳಲು ಸಾಕಷ್ಟು ಬರೆಯಬೇಕಾಗುತ್ತದೆ. ಇದು ಕೆಲವು ಪ್ರಮುಖ ಶಬ್ದಗಳಾಗಿರಬಹುದು ಅಥವಾ ತರಾತುರಿಯಿಂದ ಬರೆಯಲ್ಪಟ್ಟ ಡಜನ್‌ಗಳಷ್ಟು ಸಾಲುಗಳಾಗಿರಬಹುದು. ಶೀಘ್ರಲಿಪಿ ತಿಳಿದಿರುವ ವಿದ್ವಾಂಸ ಅನುಕೂಲ ಹೊಂದಿದ್ದಾನೆ; ನಮ್ಮಲ್ಲಿ ಅನೇಕರು ತಾವೇ ಅಭಿವೃದ್ಧಿಪಡಿಸಿದ ಸಂಕ್ಷೇಪಗಳು ಮತ್ತು ಅನೌಪಚಾರಿಕ ಕೋಡಿಂಗ್‌ನ್ನು ಬಳಸಿಕೊಳ್ಳುತ್ತಾರೆ. ಎಲ್ಲಿಂದಲಾದರೂ ಅಥವಾ ಯಾವಾಗಲಾದರೂ ಸಾಧ್ಯವಾದಾಗ ಭಾಷಣ (ಚರ್ಚೆ)ವನ್ನು ಅಕ್ಷರಶಃ ದಾಖಲಿಸುವಾಗ ಯಾರು ಮಾತನಾಡುತ್ತಿದ್ದಾರೆ ಮತ್ತು ಘಟನೆಯ ಅಂದಾಜು ಸಮಯವನ್ನು ಒದಗಿಸುವುದು ಉಪಯುಕ್ತವಾಗಿದೆ. ವ್ಯಕ್ತಿ, ಸ್ಥಳ ಮತ್ತು ಪರಸ್ಪರ ಪ್ರತಿಕ್ರಿಯೆ ಬಗ್ಗೆ ಅತಿ ಹೆಚ್ಚು ದಾಖಲಿಸುವುದು ಸಾಧ್ಯವಾಗುವುದಿಲ್ಲ. ಆದರೆ ಪರಿಶೀಲಿಸದೇ ಅತಿ ಹೆಚ್ಚು ಮಾಹಿತಿಯನ್ನು ಕಲೆಹಾಕುವುದು ಮೂರ್ಖತನ ಮತ್ತು ಅದರ ಬಗ್ಗೆ ಪ್ರತಿಫಲಿತವಾಗಲು ಪ್ರಾರಂಭವಾಗುತ್ತದೆ. ಚೆನ್ನಾಗಿ ಬರೆದ ಹತ್ತು ನಿಮಿಷಗಳ ಉತ್ತಮ ವೀಕ್ಷಣೆಯು ತೆರೆಯಲು ಮರೆತುಹೋಗಿ ಬಿದ್ದಿರುವ ಒಂದು ಗಂಟೆಯ ಟಿಪ್ಪಣಿಗೆ ಸಮನಾದುದು.

## ನೀವು ಹೋಗುವ ಹಾಗೆ ಸಂಘಟಿಸುವುದು :

ಹಿಂದಿನ ವಿಭಾಗ ವಿವಿಧ ದತ್ತಾಂಶಗಳ ಬಗ್ಗೆ ಗಮನ ನೀಡಿದೆ. ದತ್ತಾಂಶಗಳನ್ನು ಸಂಗ್ರಹಿಸಬಹುದು ಮತ್ತು ಸಂಗ್ರಹಿಸಲೇಬೇಕು. ಈ ದತ್ತಾಂಶಗಳನ್ನು ನಿಮ್ಮ ಜೊತೆಯೇ ವಿಶ್ಲೇಷಿಸಬೇಕು ಮತ್ತು ಅರ್ಥೈಸಬೇಕು. ಕೆಲವು ಸಲ ಸಂಶೋಧಕ ಇಂತಹ ಅಂಶಗಳಲ್ಲಿ ವಿಫಲನಾಗುತ್ತಾನೆ. ಫ್ಲೋರಿಂಡ ಡೊನ್ನರ್ (1982 : 6-9) ಪೂರ್ವ ವೆನೆಜೂಲಾದಂತಹ ಸಣ್ಣ ಪುಟ್ಟಗಳಲ್ಲಿ ಅವರು ಹೇಗೆ ಕೆಲಸ ಮಾಡುತ್ತಿದ್ದರು ಎನ್ನುವುದನ್ನು ವಿವರಿಸಿದ್ದಾರೆ. ಅವರು ಅಲ್ಲಿ ಮೂರು ಕ್ಯೂರರ್‌ಗಳ (ಹೀಲಿಂಗ್) ಚಿಕಿತ್ಸೆಯ ಅಭ್ಯಾಸವನ್ನು ಅಧ್ಯಯನ ಮಾಡಿದರು. ಅವರು ಅವರಿಂದ ಏನನ್ನು ಕಲಿತಿದ್ದರು ಎನ್ನುವುದರ ಬಗ್ಗೆ ಯಾವುದೇ ಅರ್ಥವನ್ನು ಮಾಡಿಸುವಲ್ಲಿ ಅವರು ವಿಫಲರಾದರು.

ಕ್ಷೇತ್ರಕಾರ್ಯದಲ್ಲಿ ತಿಂಗಳುಗಟ್ಟಲೆ ಸಂಗ್ರಹಿಸಲಾದ ಸಾವಿರಾರು ಪುಟದ ಟಿಪ್ಪಣಿಯು ಅನೇಕ ಸಂಖ್ಯೆಯ ಟೇಪ್‌ಗಳನ್ನು ಭಾಷಾಂತರ (ಲಿಪ್ಯಂತರ) ಅನುವಾದಗಳನ್ನು ವಿಶ್ಲೇಷಿಸಿದಾಗ ನಾನು ತುಂಬಾ ಗಂಭೀರವಾಗಿ ನನ್ನ ಸಂಶೋಧನೆಯ ಸಿಂಧುತ್ವ ಮತ್ತು ಉದ್ದೇಶಗಳನ್ನು ಸಂದೇಹದಿಂದ ನೋಡಲು ಪ್ರಾರಂಭಿಸಿದ್ದೇನೆ. ದತ್ತಾಂಶವನ್ನು ಅರ್ಥಪೂರ್ಣವಾಗಿ ಸಂಘಟಿಸುವ ನನ್ನ ಸಾಮರ್ಥ್ಯ, ಸೈದ್ಧಾಂತಿಕ ಚೌಕಟ್ಟು ನಿರರ್ಥಕವೆಂದು ಸಾಬೀತಾಯಿತು. ಇದರಲ್ಲಿ ವಸ್ತುವು ಅಸ್ಥಿರತೆ ಮತ್ತು ವಿವಾದಗಳೊಂದಿಗೆ ಹಿಡಿದಿಟ್ಟಿದೆ.

ಡೊನ್ನರ್ ಎಲ್ಲವನ್ನು ಬಿಟ್ಟು ಕಾಡಿಗೆ ಹೋದರು ಮತ್ತು ಯುನಮಾವೋಗಳ (ಪುಟ 6) ನಡುವೆ ವಾಸಿಸಿದರು. ಕಾಡನ್ನು ಬಿಡುವುದಕ್ಕಿಂತ ಮೊದಲಿಗೆ ಅವರು ಮೂರು ಕ್ಯೂರರ್‌ಗಳಲ್ಲಿ ಒಬ್ಬರಾದ ದೋಣಾ ಮುರ್ಸಿಡೆಸ್ ಅವರ ಟಿಪ್ಪಣಿಗಳನ್ನು ಸುಟ್ಟು ಹಾಕಿದ್ದನ್ನು ನೋಡಿದರು. ಅವರು ಏನು ಅನುಭವಿಸಿದಳೋ ಅದನ್ನು ಸರಳವಾಗಿ ಹೇಳುವುದಾದರೆ ಅದು ಮುಟ್ಠಾಳತನದ ಕಾರ್ಯವಾಗಿದೆ.

## ತೀರ್ಮಾನಗಳು

ಈ ಅಧ್ಯಾಯದಲ್ಲಿ ಚರ್ಚಿಸಲಾದ ಯಾವುದೇ ರೀತಿಯ ದತ್ತಾಂಶ rose candy, spikenard, mastic, terabinth, ತೈಲ ಮಸಾಲೆ ಅಥವಾ ಸ್ವರ್ಗದಲ್ಲಿರುವ ಅಲ್ಲಾ ಸಿಹಿ ಜಾಮ್ ತಿನ್ನುವಂತೆ ರೋಮಾಂಚನಕಾರಿಯಾಗಿ ಕಾಣಬಹುದು. ಆದಾಗ್ಯೂ ಸಂಕೇತಗಳ ಮಟ್ಟದಲ್ಲಿ ದತ್ತಾಂಶ ರೋಮಾಂಚನಕಾರಿಯಾಗಿದೆ ಮತ್ತು ಪ್ರಾಯೋಗಿಕವಾಗಿದೆ. ಅವು ಸಂಶೋಧಕ ತನ್ನ ಜೀವನೋಪಾಯಕ್ಕೆ ಮಾರಾಟಮಾಡುವ ವ್ಯಾಪಾರ ಸರಕುಗಳಾಗಿವೆ. ದತ್ತಾಂಶದ ಮೌಲ್ಯ ಅವುಗಳನ್ನು ಎಚ್ಚರಿಕೆಯಿಂದ ಸಂಗ್ರಹಿಸುವುದು ಮತ್ತು ದಾಸ್ತಾನು ಮಾಡುವುದನ್ನು ಅವಲಂಬಿಸಿದೆ. ಅಲ್ಲಿಯೂ ಕೂಡಾ ಅವು ಪದ್ಯದ Mastic, spikenard ಮತ್ತು terebinth ಗೆ ವಿಪರೀತವಾಗಿ ಹೋಲುತ್ತವೆ.

## ಪ್ರಮುಖ ಅಧ್ಯಯನ

ಈ ಅಧ್ಯಾಯದ ಹೆಚ್ಚಿನ ಓದಿಗಾಗಿ ಶಿಫಾರಸ್ಸಾದ ಬಾರ್ಬಾರ ಟಚ್‌ಮನ್ಸ್ ಗ್ರಂಥ (1981) Practising History ಅದರಲ್ಲಿ ವಿಶೇಷವಾಗಿ ಭಾಗ ಒಂದು The Craft ಇದನ್ನು ಓದಿರಿ.